ಹೊಸ ಮನುಷ್ಯ

ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೮ ಮಾರ್ಚ್-೨೦೦೮ ಸಂಚಿಕೆ-೮

I want world
sympathy in
this battle of
Right against
Might
Dandi M.K.Gandhi
5.4.30

I want world sympathy in this battle of Right against Might. 5-4-30 M.K. Gandhi

ದಂಡಿ ಯಾತ್ರೆಯ
೭೮ನೇ ವರ್ಷದ ಸ್ಮರಣೆ

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜಸ್ಟ್

ಮಾರ್ಚ್ - ೨೦೦೮
ಸಂಪುಟ - ೮
ಸಂಚಿಕೆ - ೮

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್ ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

✆ ೦೮೨೩೬ ೨೯೯೨೪೪
e-mail - janapada@yahoo.com

ಘೋಷಣೆ

ಹೇಳಲಿಲ್ಲ ಅಂದೀರಿ - ಕೇಳಲಿಲ್ಲಾ ಅಂದೀರಿ
ಈ ಮೂಲಕ ಯುಕ್ತ ಜನರಿಗೆ
ತಿಳಿಸುವುದೇನೆಂದರೆ -
ಯಾವ ಮನೆಯಲ್ಲೂ ಒಲೆ ಹಚ್ಚಬಾರದು
ಎಲ್ಲೇ ಬೆಂಕಿ ಕಾಣಿಸಿದರೂ ಪ್ರಭುತ್ವಕ್ಕೆ
ಅಪಾಯವಾಗುವ ಸಂಭವ - ಇರೋದರಿಂದ
ಯಾವ ಮನೆಯಲ್ಲೂ ಒಲೆ ಹಚ್ಚಬಾರದು.

ಯಾರೂ ಜೋರಾಗಿ ಉಸಿರಾಡಬಾರದು
ಉಸಿರಾಟದ ತಿದಿಗಳು ವಿದ್ರೋಹದ
ಭಾವನೆಗಳನ್ನು
ಬಡಿದೆಬ್ಬಿಸುವ ಸಂಭವ ಇರೋದರಿಂದ
ಯಾರೂ ಜೋರಾಗಿ ಉಸಿರಾಡಬಾರದು.

ಹೊಟ್ಟೆಗಿಲ್ಲದೆ ಸತ್ತರೆ ಪರವಾಯಿಲ್ಲ
ಆದರೆ ನಿರಾಹಾರ ದೀಕ್ಷೆ -
ಅನ್ಯಾಯ ಮತ್ತು ಅಪರಾಧ
ಆದರ್ಶಕ್ಕಿಂತ ಮುಂಜಾಗರೂಕತೆಯೇ ಒಳ್ಳೇದು
ಅದಕ್ಕಾಗಿ ಮುಂಜಾಗರೂಕತಾ
ಪ್ರತಿಬಂಧ ಕಾನೂನು

ದೇಶವೆಂದರೆ ಪ್ರಧಾನಮಂತಿಯಲ್ಲ
ದೇಶವೆಂದರೆ ಬೆಟ್ಟಗುಡ್ಡಗಳಲ್ಲ
ದೇಶವೆಂದರೆ ಪಾರ್ಟಿ - ಆಡಳಿತ ಪಾರ್ಟಿ
ಪಾರ್ಟಿಗೆ ವಿಧೇಯನಾದವನೇ
ಪೇಟ್ರಿಯಾಟ್ - ದೇಶಭಕ್ತ

ಸಮಾಜದ ಶ್ರೇಯಸ್ಸಿಗೇ ಆಗಲಿ
ಶಾಸನವನ್ನು ವಿರೋಧಿಸಿದವನು ವಿದ್ರೋಹಿ
ಧರ್ಮಕ್ಕಾಗಿಯೇ ಆಗಲಿ
ಸರಕಾರವನ್ನು ವಿರೋಧಿಸುವವನು
ದೇಶದ್ರೋಹಿ ಭಯೋತ್ಪಾದಕ.

ತಿಳಿಯಿತೆ? ತಿಳಿಯಿತೆ?
ಹೇಳಲಿಲ್ಲ ಅಂದೀರಿ - ಕೇಳಲಿಲ್ಲ ಅಂದೀರಿ.

- ವರವರರಾವ್

ವಿಚಾರ ದೀಪ್ತಿ

ಮಕ್ಕಳ ಕೈಗೆ ಬಂದ ಬಂದೂಕು

ಬಂದೂಕು ಸಂಸ್ಕೃತಿ ಈಗ ಓದುವ ಮಕ್ಕಳಿಗೆ ಬಂದಿರುವುದು ಆತಂಕಕಾರಿ ಬೆಳವಣಿಗೆ. ಅಮೆರಿಕ, ಬ್ರಿಟನ್ ಮತ್ತು ರಷ್ಯ ದೇಶಗಳಲ್ಲಿ ವಿದ್ಯಾರ್ಥಿಗಳು ತಮ್ಮ ಸಹಪಾಠಿಗಳನ್ನೇ ಬಂದೂಕಿನಿಂದ ಕೊಂದಿರುವ ಘಟನೆಗಳು ನಡೆದಿವೆ. ಇತ್ತೀಚಿಗೆ ದೆಹಲಿ ಬಳಿಯ ಗುಡಗಾಂವ್‌ನಲ್ಲೂ ಇಂಥ ಘಟನೆಯೊಂದು ನಡೆದಿದೆ. ಈ ಬಂದೂಕು ಸಂಸ್ಕೃತಿ ಈಗ ಬೆಂಗಳೂರಿಗೂ ಬಂದದ್ದು ಆಘಾತಕಾರಿ ಬೆಳವಣಿಗೆ. ಗಿರಿನಗರದ ಶಾಲೆಯೊಂದರ ವಿದ್ಯಾರ್ಥಿ ಇಬ್ಬರು ಸಹಪಾಠಿಗಳ ಮೇಲೆ ಏರ್‌ಗನ್‌ನಿಂದ ಗುಂಡು ಹೊಡೆದು ಗಾಯಗೊಳಿಸಿರುವ ಘಟನೆ ಪೋಷಕರನ್ನು ಚಿಂತೆಗೆ ಈಡುಮಾಡಿದೆ. ತನ್ನನ್ನು ಅವಮಾನಿಸಿದರೆಂದು ಭಾವಿಸಿದ ವಿದ್ಯಾರ್ಥಿ ಇಬ್ಬರು ಸಹಪಾಠಿಗಳ ಮೇಲೆ ಗುಂಡು ಹಾರಿಸಲು ಕಾರಣ ಎನ್ನಲಾಗಿದೆ. ಮಕ್ಕಳು ಒಬ್ಬರನ್ನೊಬ್ಬರು ಬೈಯ್ದಾಡುವುದು ಹೊಡೆದಾಡುವುದು ಮತ್ತೆ ಒಂದಾಗಿ ಮಾತನಾಡುವುದು ಸಹಜ. ಆದರೆ ದ್ವೇಷ ಸಾಧಿಸಿ ಸಹಪಾಠಿಯ ಮೇಲೆ ಬಂದೂಕು ಪ್ರಯೋಗಿಸುವ ಕೆಟ್ಟ ಪರಂಪರೆ ಈಗೀಗ ಕಾಣಿಸಿಕೊಳ್ಳುತ್ತಿರುವುದು ಅಪಾಯಕಾರಿ ಬೆಳವಣಿಗೆ.

ಒಂದು ಕಾಲಕ್ಕೆ ಶಾಲೆಗಳೆಂದರೆ ಕಲಿಕೆಯ ದೇಗುಲ ಎಂಬ ಭಾವನೆ ಇತ್ತು. ಅಲ್ಲಿ ಮಕ್ಕಳಿಗೆ ಪಾಠ ಕಲಿಯುವುದನ್ನು ಬಿಟ್ಟರೆ ಸಮಾಜದ ಹೊರಗಿನ ಬೇರಾವ ಕೆಟ್ಟ ಸಂಸ್ಕೃತಿಯ ಪರಿಚಯ ಆಗುತ್ತಿರಲಿಲ್ಲ. ಆದರೆ ಈಗ ಕಾಲ ಬದಲಾಗಿದೆ. ದಿನ ನಿತ್ಯ ನಡೆಯುವ ಹಿಂಸಾಚಾರ ಮತ್ತು ಭಯೋತ್ಪಾದನೆಯಂಥ ಘಟನೆಗಳು ಟಿವಿ ಮಾಧ್ಯಮಗಳಲ್ಲಿ ವಿಜೃಂಭಿಸುತ್ತಿವೆ. ಜೊತೆಗೆ ಈಗಿನ ಸಿನಿಮಾಗಳಲ್ಲಿ ಕಂಡುಬರುವ ಮಚ್ಚು, ಲಾಂಗು ಸಂಸ್ಕೃತಿ ಮಕ್ಕಳ ಮನಸ್ಸಿನ ಮೇಲೆ ದುಷ್ಪರಿಣಾಮ ಬೀರುತ್ತಿರುವುದಕ್ಕೆ ಇಂತಹ ಘಟನೆಗಳೇ ಸಾಕ್ಷಿ. ಸಾಮಾನ್ಯವಾಗಿ ಮಕ್ಕಳಲ್ಲಿ ನೋಡಿದ್ದನ್ನು ಪ್ರಯೋಗ ಮಾಡುವ ಕುತೂಹಲ, ಸಾಹಸ ಪ್ರವೃತ್ತಿ ಇರುತ್ತದೆ. ಬೆಳವಣಿಗೆಯ ವಯಸ್ಸಿನಲ್ಲಿ ಮಕ್ಕಳ ಮನಸ್ಥಿತಿಯೂ ಬದಲಾಗುತ್ತಿರುತ್ತದೆ. ಇಂತಹ ಸಂಕ್ರಮಣ ಸ್ಥಿತಿಯಲ್ಲಿ ಅವರಿಗೆ ತಂದೆ ತಾಯಿಗಳಿಂದ ಮತ್ತು ಶಾಲೆಗಳ ಶಿಕ್ಷಕರಿಂದ ಸರಿಯಾದ ತಿಳಿವಳಿಕೆ ಆಗಬೇಕು. ಮಕ್ಕಳಿಗೆ ನೈತಿಕ ಶಿಕ್ಷಣ ನೀಡಬೇಕಾದ ಜವಾಬ್ದಾರಿಯಿಂದ ಇವರು ನುಣಿಚಿಕೊಳ್ಳಲಾಗದು. ನಗರಗಳಲ್ಲಿ ಶ್ರೀಮಂತಿಕೆ ಹೆಚ್ಚುತ್ತಿದ್ದಂತೆ ಜೀವ ರಕ್ಷಣೆಗೆ ಕೆಲವರು ಲೈಸನ್ಸ್ ಪಡೆದು ಮನೆಗಳಲ್ಲಿ ಬಂದೂಕು ಮತ್ತು ಪಿಸ್ತೂಲುಗಳನ್ನು ಇಟ್ಟುಕೊಳ್ಳುತ್ತಿರುವ ಪರಿಪಾಠ ಹೆಚ್ಚುತ್ತಿದೆ. ಅಪಾಯಕಾರಿ ಶಸ್ತ್ರಗಳು ಮಕ್ಕಳ ಕೈಗೆ ಸಿಗದಂತೆ ನೋಡಿಕೊಳ್ಳಬೇಕು. ಸದ್ಯ ಬೆಂಗಳೂರಿನ ವಿದ್ಯಾರ್ಥಿ ಕೈಯಲ್ಲಿ ಸಿಕ್ಕಿದ್ದು ಏರ್‌ಗನ್ ಆದ್ದರಿಂದ ಆತ ಗುರಿಯಿಟ್ಟು ಹೊಡೆದ ವಿದ್ಯಾರ್ಥಿಗಳಿಬ್ಬರು ಅಪಾಯದಿಂದ ಪಾರಾಗಿರುವುದು ಸಮಾಧಾನಕರ ಸಂಗತಿ. ಮಕ್ಕಳನ್ನು ಸತ್ಪ್ರಜೆಯಾಗಿ ಬೆಳೆಸುವುದು ತಂದೆ ತಾಯಿಗಳ ಜವಾಬ್ದಾರಿ. ಇಲ್ಲವಾದರೆ ಇಂಥ ಮಕ್ಕಳು ಮುಂದೆ ಸಮಾಜಕ್ಕೆ ಕಂಟಕಪ್ರಾಯರಾಗುವ ಅಪಾಯವಿದೆ.

– ಸಾಭಾರ (ಪ್ರಜಾವಾಣಿ)

ದಂಡಿ ಯಾತ್ರೆಯ ೭೫ನೇ ವರ್ಷದ ಸ್ಮರಣೆ

- ಸುರೇಂದ್ರ ಕೌಲಗಿ

ಇಂದು ಇಡೀ ಭಾರತ ಸತ್ಯಾಗ್ರಹದ ಶಾಲೆಯಲ್ಲಿ ಪಾಠವನ್ನು ಕಲಿಯುತ್ತಿದೆ.
- ಗಾಂಧೀ (೧೨-೩-೧೯೩೦)

ಉಪ್ಪಿನ ಸತ್ಯಾಗ್ರಹ ಅಥವಾ ದಂಡಿಯಾತ್ರೆ ಹತ್ತೊಂಭತ್ತನೇ ಶತಮಾನದಲ್ಲಿ ಮಾನವನು ತನ್ನ ಸಂಸ್ಕೃತಿಯ ಶೋಧನೆಯಲ್ಲಿ ಕೈಗೊಂಡ ಪ್ರಮುಖ ಪ್ರಯತ್ನಗಳಲ್ಲಿ ಒಂದಾಗಿದೆ. ಅಲೆಮಾರಿ ಸಂಸ್ಕೃತಿಯಿಂದ ಪ್ರಾರಂಭಿಸಿ, ಅರಣ್ಯ ಸಂಸ್ಕೃತಿಯ ಮೂಲಕ ನಡೆದು ಬಂದ ಮಾನವ ಸತತವಾಗಿ ಸಂಸ್ಕೃತಿಯ ಅನ್ವೇಷಕನಾಗಿಯೇ ಉಳಿದಿದ್ದಾನೆ. ಆ ಅನ್ವೇಷಣೆ ಇನ್ನೂ ನಡೆಯುತ್ತಲೇ ಇದೆ. ಎಲ್ಲಿಯವರೆಗೆ "ಇದೇ ಸರಿಯಾದ ಮಾನವ ಸಂಸ್ಕೃತಿ," ಎಂದು ಒಪ್ಪಿಕೊಳ್ಳಲಾದ ಸಂಸ್ಕೃತಿಯನ್ನು ಉಳಿಸಿಕೊಂಡು ಬರುವುದಷ್ಟೇ ಇನ್ನು ತನ್ನ ಮುಂದಿನ ಕರ್ತವ್ಯ ಎಂದು ಮನುಷ್ಯ ಭಾವಿಸುವವರೆಗೆ ಅವನ ಮುಂದೆ ಹೊಸ ಸಂಸ್ಕೃತಿಯ ದಿಗಂತ ತೆರೆದುಕೊಳ್ಳುತ್ತಲೇ ಹೋಗುತ್ತದೆ. ಅವನ ಪಯಣವೂ ಆ ದಿಕ್ಕಿನತ್ತ ಸಾಗುತ್ತದೆ. ಸಂಸ್ಕೃತಿಯ ಶೋಧನೆಯ ಪ್ರಯತ್ನ ವಿಶ್ವದಾದ್ಯಂತ ವಿವಿಧ ಸ್ಥಳಗಳಲ್ಲಿ, ವಿವಿಧ ಕಾಲಘಟ್ಟಗಳಲ್ಲಿ ನಿರಂತರವಾಗಿ ನಡೆದುಕೊಂಡು ಬಂದಿದೆ. ಪ್ರತಿಯೊಂದು ದೇಶ, ಆ ದೇಶದಲ್ಲಿಯ ಪ್ರತಿಯೊಂದು ಜನಸಮೂಹ ಸಂಸ್ಕೃತಿಯ ಶೋಧನೆಯಲ್ಲಿ ತೊಡಗಿಸಿಕೊಳ್ಳುತ್ತಾ ಬಂದಿವೆ. ಭೂಮಿಯ ಮೇಲೆ ಹರಿಯುವ ಅಸಂಖ್ಯಾತ ತೊರೆಗಳಂತೆಯೇ ಸಂಸ್ಕೃತಿಯ ತೊರೆಗಳೂ ಹರಿಯುತ್ತಿವೆ ಮತ್ತು ಮಾನವ ಕುಲ ಎಂಬ ಸಾಗರವನ್ನು ಸೇರುತ್ತಿವೆ. ತೊರೆ ತಾನು ಪಯಣಿಸುವ ಮಾರ್ಗವನ್ನು ಫಲವತ್ತಾಗಿ ಮಾಡುವಂತೆ ಕೆಲವೊಂದು ಸಲ ವಿನಾಶಕ್ಕೂ ಕಾರಣವಾಗುತ್ತದೆ. ಮಾನವಕುಲದ ಬೃಹತ್ ಸಂಸ್ಕೃತಿಯ ಸಾಗರವನ್ನು ಸೇರಿದ ಒಂದು ತೊರೆ ಭಾರತದಲ್ಲಿಯೂ ಹರಿಯಿತೆಂಬುದು ಭಾರತದ ಅಗ್ಗಳಿಕೆಯಾಗಿದೆ. ಸಂಸ್ಕೃತಿಯ ಉದಯ ಯಾವಾಗಲೂ ಸತ್ಯ ಮತ್ತು ಅಸತ್ಯಗಳ ಮಧ್ಯದ ಘರ್ಷಣೆಯೊಂದಿಗೆ ಆಗುತ್ತಾಬಂದಿದೆ.

ಇಂದಿಗೆ ಎಪ್ಪತ್ತೊಂಭತ್ತು ವರ್ಷಗಳ ಹಿಂದೆ ಶೋಷಣೆಯ ಬಲದಿಂದ ಜಗತ್ತಿನಲ್ಲಿ ಹುಟ್ಟಿಕೊಂಡಿದ್ದ ಒಂದು ಬೃಹತ್ ಸಾಮ್ರಾಜ್ಯವನ್ನು ಒಂದೂವರೆ ಶತಮಾನ ಕಾಲ ಆ ಸಾಮ್ರಾಜ್ಯದ ಪದತಲದಲ್ಲಿ ಸಿಕ್ಕಿ ಹಾಕಿಕೊಂಡು ನರಳುತ್ತಿದ್ದ ಪ್ರಾಚೀನ ಸಂಸ್ಕೃತಿಯ ದೇಶವೊಂದು ಪುನಃ ತನ್ನತನವನ್ನು ಪಡೆಯುವ ರೋಮಾಂಚನಕಾರಿಯಾದ ಹೋರಾಟವೇ ದಂಡಿಯಾತ್ರೆ ಅಥವಾ ಉಪ್ಪಿನ ಸತ್ಯಾಗ್ರಹ.

ಆ ಸತ್ಯಾಗ್ರಹದ ನಾಯಕ ಮೂಳೆ-ಮಾಂಸದ ತಡಿಕೆಯಂತಿದ್ದ ಸಾಧಾರಣನಾದ ಮನುಷ್ಯ - ಗಾಂಧೀ. ತಾನೂ ಸಾಮಾನ್ಯ, ಅನುಯಾಯಿಗಳೂ ಸಾಮಾನ್ಯ. ಅಂಥವರಿಂದ ಕೂಡಿದ್ದ ಜನಸ್ತೋಮ ಸತ್ಯ ಮತ್ತು ಅಹಿಂಸೆಗಳ ಮಂತ್ರ ಜಪಿಸುತ್ತಾ ಅಸಾಮಾನ್ಯವಾಗಿ ರೂಪುಗೊಂಡ ಕಥೆ ದಂಡಿ ಯಾತ್ರೆಯ

ಕಥೆ. ಒಂದು ಹಿಡಿ ಉಪ್ಪಿನ ಸುತ್ತ ಸತ್ಯ ಮತ್ತು ಅಸತ್ಯಗಳ ಹೋರಾಟದ ಇನ್ನೊಂದು ಮಾಹಾಭಾರತ ದಂಡಿಯಾತ್ರೆ.

ಈ ಯಾತ್ರೆಯ ಎಪ್ಪತ್ತೈದನೇ ವರ್ಷವನ್ನು ರಾಜಕೀಯ ಪಕ್ಷಗಳಲ್ಲಿ ಪ್ರಮುಖವಾದ ಕಾಂಗ್ರೆಸ್ ಪಕ್ಷ 'ಆಡ್ದೂರಿ'ಯಾಗಿ ಆಚರಿಸಿತ್ತು. ಆದರೆ ಮುಂದಿನ ವರ್ಷಗಳಲ್ಲಿ ಆ ಯಾತ್ರೆಯ ಆಚರಣೆಯನ್ನು ಮರೆತಿತು.

ಆದರೆ ಆ ಸತ್ಯಾಗ್ರಹದಲ್ಲಿ ಒಳಗೊಂಡಿದ್ದ ವಿಚಾರಗಳು ಕಾಂಗ್ರೆಸ್ ಪಕ್ಷದವಲ್ಲ; ಆ ಕಾರ್ಯಕ್ರಮದಲ್ಲಿ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದವರು ಕಾಂಗ್ರೆಸ್ ಪಕ್ಷದ ಸದಸ್ಯರಲ್ಲ; ಜನಸಾಮಾನ್ಯರು, ಮಹಿಳೆಯರು, ವೃದ್ಧರು, ಮಕ್ಕಳು, ರೈತರು, ಗ್ರಾಮೀಣರು, ಸರ್ಕಾರಿ ಅಧಿಕಾರಿಗಳು ಆದಿಯಾಗಿ ಆ ಯಾತ್ರೆಯಲ್ಲಿ ಭಾಗವಹಿಸಿದ್ದರು. ದೇಶದ ರಾಜಕೀಯ ಬೆಳವಣಿಗೆಯ ಕಾರಣದಿಂದ ಕಾಂಗ್ರೆಸ್ ಪಕ್ಷಕ್ಕೂ ದಂಡಿಯಾತ್ರೆಗೂ ಸಂಬಂಧ ಬೆಳೆಯಿತೇ ಹೊರತು ಆ ಯಾತ್ರೆಯ ಕಲ್ಪನೆ ಗಾಂಧಿಯದು; ಆ ಯಾತ್ರೆಯ ಸರ್ವಾಧಿಕಾರಿ ನಾಯಕ ಗಾಂಧೀಜಿ. ಆ ಯಾತ್ರೆಯ ಅವಧಿಯಲ್ಲಿ ಕಾಂಗ್ರೆಸ್ ನಾಯಕರು ನಾಟಕದಲ್ಲಿಯ ಪಾತ್ರಗಳಂತೆ ಬಂದು ಹೋಗುತ್ತಿದ್ದರು, ಅಷ್ಟೇ.

ದಂಡಿಯಾತ್ರೆಯ ಮೂಲ ವಿಚಾರಗಳು ಹಾಗೂ ಯಾತ್ರೆಯನ್ನು ಪ್ರಾರಂಭಿಸಬೇಕೆಂಬ ವಿಚಾರ ಯಾವುದೂ ಹೊರಗಿನ ಸಂಘಟನೆಯಿಂದ ಬಂದಿದ್ದಲ್ಲ. ಅವೆಲ್ಲವೂ ಗಾಂಧಿಯ ಮನಸ್ಸಿನಲ್ಲಿಯ ತುಡಿತ, ಆತ್ಮಶೋಧನೆಯ ಮಂಥನದಿಂದ ಹೊರಬಂದವಾಗಿದ್ದವು. ಗಾಂಧೀಜಿ ಕಾಂಗ್ರೆಸ್ ಸಂಘಟನೆಯ ನಾಲ್ಕಾಣೆ ಶುಲ್ಕದ ಸದಸ್ಯತ್ವವನ್ನೂ ಹೊಂದಿರಲಿಲ್ಲ. ಅವರು ದಂಡಿಯಾತ್ರೆಯನ್ನು ತಾವು ಕಂಡುಕೊಳ್ಳಲೆತ್ನಿಸಿದ್ದ ಸತ್ಯದ ದರ್ಶನಕ್ಕಾಗಿ, ತಾವು ನಂಬಿದ್ದ ಅಹಿಂಸಾ ಶಕ್ತಿಯ ಪರಮ ಪ್ರಯೋಗಕ್ಕಾಗಿ ಹೂಡಿದ್ದರು. ಈ ದಂಡಿಯಾತ್ರೆಯ ವಿಚಾರ ಇದುವರೆಗೆ ಇಲ್ಲದುದು ಈಗ ಸ್ಫುರಿಸುವುದಕ್ಕೆ ಕೂಡಿಬಂದ ಕಾರಣಗಳೇನು ಎಂಬ ಪ್ರಶ್ನೆಗೆ ಅವರು ಕೊಟ್ಟ ಉತ್ತರ ಹೀಗಿದೆ: "ಹೊರಾಂಗಣದಲ್ಲಿ ಅಂಥದ್ದೇನೂ ಸಂಭವಿಸಿಲ್ಲ. ಆದರೆ ನನ್ನ ಒಳಾಂಗಣದಲ್ಲಿ ನನ್ನಲ್ಲಿದ್ದ ತುಮುಲವೇ ಅಡ್ಡಿಯಾಗಿತ್ತು. ಈಗ ಅದು ನಿಂತಿದೆ. ಉಪ್ಪಿನ ಸತ್ಯಾಗ್ರಹದಂಥ ಚಳುವಳಿ ಬಹಳ ಕಾಲದಿಂದಲೇ ಕಾದು ನಿಂತಿದೆ. ಇದಕ್ಕೂ ಮೊದಲೇ ಇದನ್ನು ಪ್ರಾರಂಭಿಸಬಹುದಾಗಿತ್ತು." ಎಂಬೀ ಅವರ ಉತ್ತರಕ್ಕೆ ಆ ಒಳಾಂಗಣದ ತುಮುಲವೇನು ಎಂಬ ಮರುಪ್ರಶ್ನೆಗೆ ಮರುಧ್ವನಿಯಾಗಿ ಗಾಂಧೀಜಿಯವರ ಉತ್ತರ ಹೀಗಿತ್ತು, "ಅಹಿಂಸೆಯ ಬಗ್ಗೆ ಇರುವ ನನ್ನ ಮನೋವೃತ್ತಿಯೇ ನನ್ನನ್ನು ಯಾವಾ ಗಲೂ ದಿಗ್ದರ್ಶನ ಮಾಡಿತ್ತೆಂಬುದು ನಿಮಗೆ ಗೊತ್ತಿದೆ. ಆದರೆ ಅದನ್ನು ಹೆಚ್ಚುತ್ತಿರುವ ಹಿಂಸೆಯ ಸಂದರ್ಭದಲ್ಲಿ ಕೃತಿಯಲ್ಲಿ ಹೇಗೆ ಪರಿವರ್ತಿಸಬೇಕೆಂಬುದು ಗೊತ್ತಿರಲಿಲ್ಲ. ಆದರೆ ಈಗ ನಾನು ಕೈಗೊಳ್ಳುತ್ತಿರುವ ಕ್ರಮ ಆ ಹಿಂಸೆಯನ್ನು ತಡೆಯುವ ನನ್ನ ಪ್ರಯತ್ನದಲ್ಲಿಯ ಅಪಾಯವನ್ನು ಬಹಳಷ್ಟು ಮಟ್ಟಿಗೆ ಕಡಿಮೆ ಮಾಡುತ್ತದೆಂದು ನನಗೆ ಸೂರ್ಯನ ಬೆಳಕಿನಷ್ಟೇ ಸ್ಪಷ್ಟವಾಗಿ ಕಾಣುತ್ತಿದೆ."

ಈ ಪ್ರಶ್ನೋತ್ತರಕ್ಕೆ ಮುನ್ನ ಗಾಂಧೀಜಿಯವರು ಸತ್ಯ ಮತ್ತು ಅಹಿಂಸೆಗಳಿಂದಲೇ ಆ ಯಾತ್ರೆಯ ಸಂದೇಶ ಯಾವುದೇ ಬಗೆಯ ತಾಂತ್ರಿಕ ವ್ಯವಸ್ಥೆಯಿಲ್ಲದೆಯೂ ಜನರನ್ನು ಮುಟ್ಟುತ್ತದೆ ಎಂಬುದಾಗಿ ಹೇಳಿದ್ದರು.

ಆದ್ದರಿಂದ ದಂಡಿಯಾತ್ರೆ ಅಥವಾ ಉಪ್ಪಿನ ಸತ್ಯಾಗ್ರಹ ಭಾರತವನ್ನು ಉನ್ನತ ಸಂಸ್ಕೃತಿಯತ್ತ ಕೈಹಿಡಿದು ನಡೆಸಿಕೊಂಡು ಹೋಗುವ ಮಹಾಯಾತ್ರೆಯಾಗಿತ್ತು. ಜೊತೆಗೆ ಪ್ರಪಂಚದಲ್ಲಿಯೇ ಅತ್ಯಂತ ಕೇಡಿನ ಮನೋಭಾವದ ಮೇಲೆ ಸ್ಥಾಪಿತಗೊಂಡಿದ್ದ ವಿಶ್ವ ಸಾಮ್ರಾಜ್ಯವನ್ನು ಮಾನವ ಸಂಸ್ಕೃತಿಯ ಮೂಲ ನೆಲಗಳಾದ ಸತ್ಯ ಮತ್ತು ಅಹಿಂಸೆಯ ಸಾಧನಗಳ ಮೂಲಕ ನಾಶಮಾಡುವುದೂ ಆಗಿತ್ತು.

ಹೀಗೆ ಹತ್ತೊಂಭತ್ತನೇ ಶತಮಾನದ ಆದಿ ಭಾಗದಲ್ಲಿ ಭಾರತದಲ್ಲಿ ಹರಿದ ಸಂಸ್ಕೃತಿಯ ತೊರೆ ತಾನು ಹರಿದು ಹೋದೆಡೆಯಲ್ಲೆಲ್ಲಾ ಮಾನವ ಧರ್ಮಕ್ಕೆ ಚಿಗುರೊಡೆಸಿತು, ಜೊತೆಗೆ ಇಂಗ್ಲಿಷ್ ಸಾಮ್ರಾಜ್ಯದ ಹೆಬ್ಬಂಡೆಯನ್ನು ಸೀಳಿತು.

ಭಾರತದ ಸ್ವಾತಂತ್ರ್ಯ ಇತಿಹಾಸದಲ್ಲಿ, ಮಾನವನ ಸಂಸ್ಕತಿಯ ಪಥದಲ್ಲಿ ಮೈಲಿಗಲ್ಲಾಗಿ ಶೋಭಿಸುತ್ತಿರುವ ದಂಡಿಯಾತ್ರೆಯ ಸ್ಮರಣೆ, ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ ಮತ್ತು ಗಾಂಧೀ ಜಯಂತಿ ಮುಂತಾದವುಗಳ ಆಚರಣೆಗಿಂತಲೂ ಅಗತ್ಯವುಳ್ಳದ್ದಾಗಿದೆ.

ದೇಶಕ್ಕೆ ಸ್ವಾತಂತ್ರ್ಯ ಬಂದು ಅರವತ್ತು ವರ್ಷಗಳಾದವು; ಹತ್ತು ಪಂಚವಾರ್ಷಿಕ ಯೋಜನೆಗಳು ಮುಗಿದು ಅತ್ಯಗಾಧ ಪ್ರಮಾಣದ ಬಜೆಟ್ ಹೊಂದಿರುವ ಹನ್ನೊಂದನೇ ಪಂಚವಾರ್ಷಿಕ ಯೋಜನೆ ಪ್ರಾರಂಭವಾಗಿದೆ; ದೇಶದಾದ್ಯಂತ ವಿಶ್ವವಿದ್ಯಾನಿಲಯಗಳ ಸ್ಥಾಪನೆಯಾಗುತ್ತಿದೆ; ಸರ್ವಶಿಕ್ಷಣ ಅಭಿಯಾನ ಕೆಲವು ವರ್ಷಗಳಿಂದ ನಡೆಯುತ್ತಿದೆ; ಉದ್ಯೋಗ ಭರವಸೆ ಯೋಜನೆಯು ಜಾರಿಗೊಂಡಿದೆ; ದೇಶದ ಸೈನ್ಯ ಮತ್ತು ಪೋಲಿಸ್ ಪಡೆ ಅತ್ಯಾಧುನಿಕ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತವಾಗಿದೆ; ಚಂದ್ರಯಾನದ ಸಿದ್ಧತೆಯೂ ನಡೆಯುತ್ತಿದೆ; ದೇಶದ ಎಲ್ಲಕಡೆ ವಿಶೇಷ ಆರ್ಥಿಕ ವಲಯಗಳ ಸ್ಥಾಪನೆಯಾಗುತ್ತಿದೆ; ಆಡಳಿತದ ವಿಕೇಂದ್ರೀಕರಣವಾಗಿ ಪಂಚಾಯತ್ ರಾಜ್ಯ ವ್ಯವಸ್ಥೆ ಜಾರಿಗೆ ಬಂದಿದೆ. ಮೊಬೈಲುಗಳ ಮೂಲಕ ಸಂಪರ್ಕ ಸುಲಭವಾಗಿದೆ. ಹೀಗೆ ಈ ಅರವತ್ತು ವರ್ಷಗಳಲ್ಲಿ ಭಾರತ ದಶದಿಕ್ಕುಗಳಲ್ಲೂ ಅಭಿವೃದ್ಧಿಯನ್ನು ಸಾಧಿಸಿದೆ.

ಈ ಹಿನ್ನೆಲೆಯುಳ್ಳ ಅಭಿವೃದ್ಧಿ ರಂಗದಲ್ಲಿ ಕಣ್ಮರೆಯಾಗಿರುವ ಪ್ರಧಾನ ಅಂಶ ಎಪ್ಪತ್ತೆಂಟು ವರ್ಷಗಳ ಹಿಂದೆ ದಂಡೀ ಯಾತ್ರೆಯ ಮೂಲಕ ದೇಶದ ಜನಜೀವನದಲ್ಲಿ ಸ್ಥಾಪಿತಗೊಳಿಸಲು ಗಾಂಧೀ ಬಯಸಿದ್ದ ಸತ್ಯ ಮತ್ತು ಅಹಿಂಸೆಗಳು.

ಸತ್ಯ ಮತ್ತು ಅಹಿಂಸೆಗಳು ಇಲ್ಲದಂಥ ಸಮಾಜ ಸಾಂಸ್ಕೃತಿಕ ಸಮಾಜವಲ್ಲವೆಂಬ ಅನುಭವ ಸಮಸ್ತ ದೇಶವಾಸಿಗಳಿಗೆ ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ, ಯುಗಾದಿಯಿಂದ ಯುಗಾದಿಯವರೆಗೆ ಆಗುತ್ತಿದೆ. ಆದರೆ ಆಧುನಿಕ ಸಂಸ್ಕೃತಿಯ ಬಗ್ಗೆ ಬೀಗುತ್ತಿರುವ ಇಂದಿನ ಭಾರತೀಯ ಸಮಾಜ,

ಸರ್ಕಾರ, ರಾಜಕಾರಣಿಗಳು, ಪತ್ರಿಕೆಗಳು, ಬುದ್ಧಿಜೀವಿಗಳು, ಶಿಕ್ಷಣತಜ್ಞರು, ತಂತ್ರಜ್ಞರು ಮತ್ತು ಸಾಮಾನ್ಯ ಜನರು ಅಧೋಗತಿಗಿಳಿಯುತ್ತಿರುವ ಸಮಾಜದ ಬಗ್ಗೆ ಕಿಂಚಿತ್ತೂ ಚಿಂತಿತರಾಗಿಲ್ಲ.

ಎಪ್ಪತ್ತೊಂಭತ್ತು ವರ್ಷಗಳ ಹಿಂದೆ ಗಾಂಧೀಜಿ ದಂಡಿಯಾತ್ರೆಯನ್ನು ಪ್ರಾರಂಭಿಸುವುದಕ್ಕೆ ಕಾರಣವಾದ ಸಂಗತಿಗಳು ಇಂದೂ ಪ್ರಜ್ವಲಿಸುತ್ತಿವೆ.

ಆಗ ಇಂಗ್ಲೆಂಡ್ ಒಂದೇ ದೊಡ್ಡ ಸಾಮ್ರಾಜ್ಯವನ್ನು ಸ್ಥಾಪಿಸಿ ಭಾರತ ದೇಶವೊಂದನ್ನೇ ಶೋಷಣೆ ಮಾಡುತ್ತಿದ್ದರೆ ಇಂದು ಜಗತ್ತಿನ ಹಲವಾರು ದೇಶಗಳು ತಮ್ಮಲ್ಲಿಯ ವೈಜ್ಞಾನಿಕ, ತಾಂತ್ರಿಕ ಮತ್ತು ಶಸ್ತ್ರಾಸ್ತ್ರ ಬಲದಿಂದ ಹಲವಾರು ಹಿಂದುಳಿದ ದೇಶಗಳನ್ನು ತಮ್ಮ ತೆಕ್ಕೆಯೊಳಕ್ಕೆ ತೆಗೆದುಕೊಳ್ಳಲು ಪೈಪೋಟಿ ನಡೆಸಿವೆ. ಭೂಮಿಯ ಮೇಲೂ ಅಲ್ಲ, ಆಕಾಶದಲ್ಲೂ, ಗ್ರಹಗಳಲ್ಲೂ ಸಾಮ್ರಾಜ್ಯದ ತಮ್ಮ ಕಬಂಧಬಾಹುವನ್ನು ಚಾಚುತ್ತಿವೆ. ಇಂಗ್ಲಿಷ್ ಸಾಮ್ರಾಜ್ಯ ಭಾರತದಲ್ಲಿ ಜನಸಾಮಾನ್ಯರ ದಿನನಿತ್ಯದ ಬಳಕೆ ಪದಾರ್ಥವಾದ ಒಂದು ಉಪ್ಪಿನ ಮೇಲೆ ತೆರಿಗೆ ಹಾಕಿದ್ದರೆ ಇಂದಿನ ಆಧುನಿಕ ಸರ್ಕಾರಗಳು ಬಳಕೆಯ ಎಲ್ಲಾ ಪದಾರ್ಥಗಳ ಮೇಲೆ ಸುಂಕಗಳನ್ನೂ, ತೆರಿಗೆಗಳನ್ನೂ ಹಾಕಿ ಜನಸಾಮಾನ್ಯರ ಜೀವನವನ್ನು ದುಸ್ತರಗೊಳಿಸಿವೆ.

ಗಾಂಧೀಜಿ ನಡೆಸಿದ್ದ ದಂಡಿಯಾತ್ರೆಯ ಉದ್ದೇಶ ಉಪ್ಪಿನ ಮೇಲಿನ ಕರವನ್ನು ತೆಗೆದುಹಾಕುವ ಏಕೈಕ ಉದ್ದೇಶವನ್ನು ಹೊಂದಿದ್ದರೂ ಆ ಉದ್ದೇಶಕ್ಕೆ ಹತ್ತಾರು ಆಯಾಮಗಳಿದ್ದವು. ಆ ಆಯಾಮಗಳೇ ನಮಗೆ ಇಂದು ಪ್ರಸ್ತುತವಾಗಿರುವುದರಿಂದ ಗತಕಾಲದ ದಂಡಿಯಾತ್ರೆಯ ಹಿಂದಿದ್ದ ಉದ್ದೇಶಗಳು, ಗೊತ್ತು ಗುರಿಗಳು ವರ್ತಮಾನಕ್ಕೂ ಸಲ್ಲುತ್ತವೆಂಬುದರಲ್ಲಿಯೇ ದಂಡೀ ಯಾತ್ರೆಯು ರಾಜಕೀಯಕ್ಕಿಂತ ಸಾಂಸ್ಕೃತಿಕವಾಗಿ ಇಂದಿನ ಆಧುನಿಕ ಸಮಾಜಕ್ಕೆ ಹೆಚ್ಚು ಅಪ್ಯಾಯಮಾನವಾಗುತ್ತದೆ.

ಗಾಂಧೀಜಿ ತಮ್ಮ ಯಾತ್ರೆಯ ಪ್ರಾರಂಭದಲ್ಲಿ ಮತ್ತು ಯಾತ್ರೆಯ ಸಮಯದಲ್ಲಿ ಹೇಳಿದ್ದೇನು ಎಂಬುದನ್ನು ಗಮನಿಸಿದರೆ ಆ ಯಾತ್ರೆ ಕೇವಲ ಉಪ್ಪಿನ ಮೇಲಿನ ಕರದ ಕಾನೂನನ್ನು ಮುರಿಯುವುದಕ್ಕಷ್ಟೇ ಸೀಮಿತವಾಗಿದ್ದಿರದೇ ಯಾವುದೇ ಸಮಾಜ ವ್ಯವಸ್ಥೆಗೆ, ಮಾನವ ಸಂಸ್ಕೃತಿಗೆ ತಕ್ಕುದಾದಂಥ ಮೌಲ್ಯಗಳಾದ ಸತ್ಯ ಮತ್ತು ಅಹಿಂಸೆಗಳನ್ನು ಸ್ಥಾಪಿಸುವುದೇ ಅದರ ಗುರಿಯಾಗಿತ್ತು. ಈ ಎರಡು ಮೌಲ್ಯಗಳ ಅಸ್ತಿಭಾರದ ಮೇಲೆ ಸಮಾಜ ಕಟ್ಟಬೇಕೆಂದು ಗಾಂಧೀಜಿ ಬಯಸಿದ್ದರು. ಈ ಎರಡೂ ಮೌಲ್ಯಗಳು ಕೇವಲ ಅಲಂಕಾರಿಕ ಶಬ್ದಗಳಾಗಿರದೆ ಜನತೆಯ ಹಾಗೂ ಜನತೆಯನ್ನು ಪ್ರತಿನಿಧಿಸುವ ಎಲ್ಲ ಬಗೆಯ ಕ್ರಿಯೆಗಳಲ್ಲಿ ಈ ಮೌಲ್ಯಗಳು ಪ್ರತಿಬಿಂಬಿತವಾಗಬೇಕೆಂದೂ ಬಯಸಿದ್ದರು.

ಸತ್ಯ ಮತ್ತು ಅಹಿಂಸೆ ಕುರಿತು ಗಾಂಧೀಜಿ ಹಾಕಿಕೊಂಡಿದ್ದ ಚೌಕಟ್ಟು ವಿಸ್ತಾರವಾಗಿದ್ದುದಾಗಿತ್ತು. ಆ ಎರಡೂ ಮೌಲ್ಯಗಳು ಜೀವನದ ಪ್ರತಿಯೊಂದು ಕ್ರಿಯೆಯನ್ನೂ, ಚಿಂತನೆಯನ್ನೂ ಅವುಗಳ ಒರೆಗಲ್ಲಿಗೆ ಉಜ್ಜಿ ನೋಡುವಷ್ಟರ

ಮಟ್ಟಿಗೆ ವಿಸ್ತಾರವಾಗಿದ್ದವು. ಹಣದ ದುಂದುಗಾರಿಕೆ ಸತ್ಯಕ್ಕೆ ವಿರೋಧವಾದುದ್ದೆಂದು ಗಾಂಧೀಜಿ ತಮ್ಮ ದಂಡೀ ಯಾತ್ರೆಯ ಪ್ರಾರಂಭದಲ್ಲಿಯೇ ಸಾರುತ್ತಾರೆ. ತಮ್ಮ ಯಾತ್ರೆಯ ಖರ್ಚು ಯಾರಿಗೂ ಭಾರವಾಗಬಾರದೆಂದು ತಮ್ಮನ್ನೂ ಸೇರಿಸಿ ೭೮ ಯಾತ್ರಿಕರ ಊಟ-ವಸತಿಯ ಖರ್ಚನ್ನು ಸೊನ್ನೆ ಎಂಬಷ್ಟರ ಮಟ್ಟಿಗೆ ಇಳಿಸುತ್ತಾರೆ. ಅಲ್ಲದೆ ಜನರು ಸ್ವಯಂಪ್ರೇರಣೆಯಿಂದ ಕೊಡುವ ದಾನ ಮತ್ತು ಖರ್ಚಿನ ಒಂದೊಂದು ಕಾಸಿನ ಲೆಕ್ಕವನ್ನು ಇಡಬೇಕೆಂದು ತಾಕೀತು ಮಾಡುತ್ತಾರಲ್ಲದೆ, ಅದನ್ನು ಜಾರಿಗೂ ತರುತ್ತಾರೆ. ದಂಡಿಯಾತ್ರೆಯ ಸರಳತೆಯನ್ನು ಇಂದಿನ 'ಪಾದಯಾತ್ರೆ', ಸಮಾವೇಶ ಮುಂತಾದವುಗಳ ವೈಭವವನ್ನು ನೋಡಿದರೆ ಅವು ಸತ್ಯದಿಂದ ಎಷ್ಟು ದೂರಾಗಿವೆ ಎಂಬುದು ಗೊತ್ತಾಗುತ್ತದೆ. ಅದೇ ರೀತಿ ಸರ್ಕಾರದ ಆಡಳಿತ ಯಂತ್ರದ ದುಂದುಗಾರಿಕೆ ಸತ್ಯವನ್ನು ಮರೆಸಿ, ಸುಳ್ಳನ್ನು ಮೆರೆಸುವಂತೆ ಮಾಡುತ್ತದೆಂದು ಗಾಂಧೀಜಿ ನಂಬಿದ್ದರು. ಇದಕ್ಕೆ ಉದಾಹರಣೆಯಾಗಿ ಗಾಂಧೀಜಿಯವರು ತಮ್ಮ ಯಾತ್ರೆಯ ಸಮಯದಲ್ಲಿ ಅಂದಿನ ವೈಸ್‌ರಾಯ್ ಲಾರ್ಡ್ ಇರ್ವಿನ್‌ಗೆ ಬರೆದ ಪತ್ರದಲ್ಲಿ ಆಡಳಿತದ ದುಂದುವೆಚ್ಚವನ್ನು ಪ್ರಸ್ತಾಪಿಸಿದ್ದಾರೆ. ವಿಶ್ವದಲ್ಲಿಯೇ ಅತ್ಯಂತ ದುಬಾರಿ ಆಡಳಿತ ಇಂಗ್ಲಿಷ್ ಸರ್ಕಾರದ್ದೆಂದು ಹೇಳಿದ್ದಾರೆ. ಆಗ ಭಾರತದ ಸರಾಸರಿ ಆದಾಯದ ಐದು ಸಾವಿರ ಪಟ್ಟು ಹೆಚ್ಚು ಸಂಬಳವನ್ನು ಇರ್ವಿನ್ ಪಡೆಯುತ್ತಿರುವುದನ್ನು ತಿಳಿಸಿದ್ದಾರೆ. ಓರ್ವ ಭಾರತೀಯನ ಒಂದು ದಿನದ ಆದಾಯ ಕೇವಲ ಎರಡು ಆಣೆಯಿತ್ತು. ದುಬಾರಿ ಖರ್ಚಿನ ಆಡಳಿತ ಇಂದಿಗೂ ಇದೆ. ಓರ್ವ ಗ್ರಾಮೀಣ ಭಾರತೀಯನ ಒಂದು ದಿನದ ಆದಾಯ ನೂರು ರುಪಾಯಿ ಇಲ್ಲ. ಆದರೆ ನಮ್ಮ ರಾಷ್ಟ್ರಪತಿಯವರ ಒಂದು ದಿನದ ಆದಾಯ ನಾಲ್ಕು ಸಾವಿರಕ್ಕಿಂತಲೂ ಹೆಚ್ಚಿದೆ. ಇಂಥ ದುಬಾರಿ ಆಡಳಿತ ಸತ್ಯವನ್ನು ಮರೆಮಾಚುತ್ತದೆ. ಆದರೆ ಪ್ರಜಾಪ್ರತಿನಿಧಿಗಳು ಗಾಂಧೀಜಿಯವರು ದಂಡೀ ಯಾತ್ರೆಯ ಸಮಯದಲ್ಲಿ ಹೇಳಿದ್ದ ಮಾತನ್ನು ಎಳ್ಳಷ್ಟೂ ಗಮನಿಸಿಲ್ಲ.

ಗಾಂಧೀಜಿಯವರ ಪ್ರಾಮಾಣಿಕತೆ ಪ್ರಶ್ನಾತೀತವಾಗಿತ್ತು. ಅವರು ೧೯೩೦ ಮಾರ್ಚ್ ತಿಂಗಳಲ್ಲಿ ಭತಗಾಮ್ ಎಂಬಲ್ಲಿ ಮಾಡಿದ ಭಾಷಣ ಹೃದಯ ವಿದ್ರಾವಕವಾಗಿದೆ. ಅವರು ತಮ್ಮ ಭಾಷಣದ ಕೊನೆಯಲ್ಲಿ ಹೀಗೆ ಹೇಳುತ್ತಾರೆ, "ಸೋತು ಹೋದ ಮನುಷ್ಯನಾಗಿ ಆಶ್ರಮಕ್ಕೆ ಹಿಂದಿರುಗುವುದಕ್ಕೆ ಬದಲಾಗಿ ನಾನು ನಾಯಿಯ ಸಾವನ್ನು ಇಷ್ಟಪಡುತ್ತೇನೆ. ನಾಯಿಗಳು ನನ್ನ ಮೂಳೆಯನ್ನು ನೆಕ್ಕಲಿ; ನೀವು ಅತ್ಯಂತ ಪ್ರೀತಿಯಿಂದ ಕೊಟ್ಟ ಹಣವನ್ನು ಸರಿಯಾಗಿ ಉಪಯೋಗಿಸಲಾಗಿಲ್ಲ. ಈ ಮೊದಲು ಹೇಳಲಾದ ಶ್ಲೋಕಗಳಲ್ಲಿ ವರ್ಣಿತವಾದ ನಿರ್ಭಾಗ್ಯರಲ್ಲಿ ನಾನೊಬ್ಬನೆಂದು ನೀವು ಹೇಳುವುದಕ್ಕೆ ಹಕ್ಕನ್ನು ಹೊಂದಿದ್ದಿರಿ. ನನ್ನನ್ನು ತಿರಸ್ಕರಿಸಿ". ಮಾಹಾತ್ಮನೆಂದು ಕರೆಸಿಕೊಳ್ಳುತ್ತಿದ್ದ ಗಾಂಧೀಜಿಯವರ ಈ ಮಾತು ಇಂದಿನ ಭ್ರಷ್ಟ ಆಡಳಿತಕ್ಕೆ ಬರೆಕೊಡುವಂತಿದೆ.ಆದರೆ ಕೇಳುವವರಾರು?

* * *

ಸಂಗೀತ ಕಲಾವಿದರು – ೪

ನಾಗಸ್ವರ ವಾದಕ
ಚೆಂಗಲ್‌ಪಟ್ಟು ವಿ.ಮುತ್ತುಕೃಷ್ಣನ್

ತಮಿಳುನಾಡಿನ ನಾಗಸ್ವರಂನ ಓರ್ವ ಯುವ ಕಲಾವಿದ ಚೆಂಗಲ್‌ಪಟ್ಟು ವಿ.ಮುತ್ತುಕೃಷ್ಣನ್. ಇವರು ತಮ್ಮ ಆರನೆ ವಯಸ್ಸಿನಲ್ಲಿಯೆ ಚೆಂಗಲ್‌ಪಟ್ಟು ಸುಬ್ರಮಣಿ ಮತ್ತು ಎಂ.ವಿ.ನಟರಾಜ ಅವರಿಂದ ಶಿಕ್ಷಣವನ್ನು ಪಡೆದರು. ನಂತರ ಇವರು ತಿರುಕಣ್ಣೂರ್ ಕೆ.ಜಿ.ಗಣೇಶನ್‌ರವರಿಂದ ಕೂಡ ಉನ್ನತ ಶಿಕ್ಷಣ ಪಡೆದರು. ಮುತ್ತುಕೃಷ್ಣನ್‌ರವರು ಅನೇಕ ಸಂಗೀತಸಭೆಗಳಲ್ಲಿ ಪ್ರದರ್ಶನ ನೀಡಿದ್ದಾರೆ ಮತ್ತು ಬಹಳಷ್ಟು ಪ್ರಶಂಸೆಯನ್ನು ಪಡೆದಿದ್ದಾರೆ. ಇವರನ್ನು ಅನೇಕ ಸನ್ಮಾನಗಳಿಂದ ಮತ್ತು ಉಪಾದಿಗಳಿಂದ ಗೌರವಿಸಲಾಗಿದೆ.

ಸಂಗೀತ ಕಲಾವಿದರು – ೫

ಸಿತಾರ್ ವಾದಕ
ಪಂಡಿತ್ ಗಿರಿರಾಜ್

ಸಿತಾರ್ ವಾದ್ಯ ಸಂಗೀತದ ಪ್ರಪಂಚದಲ್ಲಿ ಪಂಡಿತ್ ಗಿರಿರಾಜ್ ಓರ್ವ ಸುಪ್ರಸಿದ್ಧ ವ್ಯಕ್ತಿ. 'ವಿಲಾಯತ್‌ಖಾನಿ ಪದ್ಧತಿ'ಯ ಅತ್ಯಂತ ಹಿರಿಯ ಪ್ರತಿನಿಧಿಯಾದ ವಿಲಾಯತ್ ಖಾನ್ ಸಾಹೇಬರ ಬಳಿ ಸಿತಾರ್‌ವಾದನದ ಶಿಕ್ಷಣ ಪಡೆದರು. ಇವರು ಆಕಾಶವಾಣಿ ಮತ್ತು ದೂರದರ್ಶನದ ಶ್ರೇಷ್ಠತಮ ಶ್ರೇಣಿಯ ಕಲಾಕಾರರಲ್ಲಿ ಒಬ್ಬರು. ಭಾರತ ಮತ್ತು ವಿದೇಶದ ಅನೇಕ ಸಂಗೀತ ಉತ್ಸವಗಳಲ್ಲಿ ಭಾಗಿಯಾಗಿ ಪ್ರಶಂಸೆಯನ್ನು ಗಳಿಸಿದ್ದಾರೆ. ಇವರು ತುಂಬಾ ಸೂಕ್ಷ್ಮ, ಭಾವನಾತ್ಮಕ ಮತ್ತು ಸುಗಮ ಶಾಸ್ತ್ರೀಯ ರಾಗಗಳನ್ನು ಪ್ರಸ್ತುತಗೊಳಿಸುವುದರಲ್ಲಿ ಪ್ರಸಿದ್ಧಿಯನ್ನು ಪಡೆದಿದ್ದಾರೆ. ಇವರ ಸಿತಾರ್‌ವಾದನವು ಸಂಕೀರ್ಣವಾಗಿ ಸಮನ್ವಯಗೊಳಿಸುದುದಾಗಿದೆ. ಇವರು ಭಾರತೀಯ ಶಾಸ್ತ್ರೀಯ ಸಂಗೀತದಲ್ಲಿ ಅನೇಕ ಮಧುರ ರಾಗಗಳನ್ನು ರಚಿಸಿದ್ದಾರೆ.

(ಮುಂದುವರಿಯುವುದು ..)

ರೈತರ ಸಾವಿನ ಗಂಟೆ

– ದೇವೇಂದ್ರ ಶರ್ಮಾ

ಸಂದೇಶ ಗಟ್ಟಿಯಾಗಿದೆ ಮತ್ತು ಸ್ಪಷ್ಟವಾಗಿದೆ. ರೈತರು ತಮ್ಮ ಗಂಟುಮೂಟೆ ಕಟ್ಟುವ ಹೊತ್ತು ಬಂದಿದೆ. ಇನ್ನು ಮುಂದೆ ದೇಶಕ್ಕಾಗಿ ಅವರು ಆಹಾರ ಬೆಳೆಯಬೇಕಾಗಿಲ್ಲ. ಮೊದಲು ಗೋಧಿಯ ಆಮದಾಗುತ್ತಿತ್ತು. ಈಗ ಸರ್ಕಾರ ಒಂದು ಹೆಜ್ಜೆ ಮುಂದೆ ಹೋಗಿದೆ. ಮೈನ್ಮಾರ್‌ನಂಥ ಪಕ್ಕದ ದೇಶಗಳಲ್ಲಿ ಎಣ್ಣೆಬೀಜಗಳನ್ನೂ, ಬೇಳೆ ಕಾಳುಗಳನ್ನೂ ಬೆಳೆಯಲು ಇಚ್ಛೆ ಪಡುವ ಭಾರತೀಯ ಕಂಪನಿಗಳಿಗೆ ಆರ್ಥಿಕ ಸಹಾಯ ಮಾಡಲು ಮುಂದೆ ಬಂದಿದೆ. ಅರ್ಥಮಂತ್ರಿ ಪಿ.ಚಿದಂಬರಂರವರ ಪ್ರಕಾರ ದೇಶದ ಆಹಾರದ ಅಗತ್ಯವನ್ನು ಈಗಿರುವ ರೈತರ ಸಂಖ್ಯೆಯ ಶೇಕಡಾ ೨೦ರಷ್ಟು ರೈತರು ಪೂರೈಸಬಲ್ಲರೆಂದು ಸ್ಪಷ್ಟವಾಗಿ ಹೇಳಿರುವ ಸಂದರ್ಭದಲ್ಲಿಯೇ ಈ ನೀತಿ ಜಾರಿಗೊಂಡಿದೆ. ವ್ಯವಸಾಯವನ್ನು ನಿಧಾನವಾಗಿ ವಿದೇಶಗಳಿಗೆ ವರ್ಗಾಯಿಸಲಾಗುತ್ತಿದೆ. ಈ ಕ್ರಮ ಲಕ್ಷಾಂತರ ಚಿಕ್ಕ ಹಾಗೂ ಅತಿ ಚಿಕ್ಕ ರೈತರಿಗೆ ಸಾವಿನಗಂಟೆ ಬಾರಿಸಿದಂತಾಗಿದೆ. ಪ್ರಧಾನಮಂತ್ರಿ ಮನಮೋಹನ ಸಿಂಗ್‌ರವರು ಆಗಾಗ್ಗೆ ಗ್ರಾಮಾಂತರ ಪ್ರದೇಶದಲ್ಲಿಯ ಬಹುದೊಡ್ಡ ಜನಸಂಖ್ಯೆಯನ್ನು ನಗರ ಪ್ರದೇಶಕ್ಕೆ ಸ್ಥಳಾಂತರಿಸಬೇಕೆಂದು ಹೇಳುತ್ತಲೇ ಬಂದಿದ್ದಾರೆ. ಜನರನ್ನು ವ್ಯವಸಾಯ ಕ್ಷೇತ್ರದಿಂದ ಹೊರ ಹೋಗುವಂತೆ ಮಾಡುವುದು ಮತ್ತು ಅವರನ್ನು ಕೈಗಾರಿಕೆ ಹಾಗು ಸೇವಾ ಕ್ಷೇತ್ರಗಳಲ್ಲಿ ತೊಡಗಿಸಬೇಕೆಂಬುದೇ ಸರ್ಕಾರದ ನೀತಿಯಾಗಿದೆ. ಇದು ಸಾಧ್ಯವಾಗುವಂತೆ ಮಾಡುವುದಕ್ಕಾಗಿ ವ್ಯವಸಾಯ ಆರ್ಥಿಕವಾಗಿ ನಷ್ಟದಾಯಕವಾಗುವಂತೆ ಮಾಡುವುದು ಸರ್ಕಾರದ ಮೊದಲ ಹೆಜ್ಜೆಯಾಗಿದೆ! ಈ ನಷ್ಟದ ಪ್ರಮಾಣ ಎಷ್ಟಿರುತ್ತದೆಂದರೆ ರೈತರು ವ್ಯವಸಾಯ ಮಾಡುವುದನ್ನು ಕಡ್ಡಾಯವಾಗಿ ಬಿಟ್ಟು ಹೋಗುವಷ್ಟರ ಮಟ್ಟಿಗೆ ಇರುತ್ತದೆ. ಎಣ್ಣೆಕಾಳು ಮತ್ತು ಬೇಳೆಗಳ ವ್ಯವಸಾಯವು ಚಿಕ್ಕ ಪ್ರದೇಶದಲ್ಲಿ ಮಾಡುವಂಥದೂ, ದೇಶದ ತುಂಬ ಇರುವ ಒಣ ಪ್ರದೇಶದಲ್ಲಿಯೂ ಮಾಡುವಂಥದೂ ಆಗಿದೆ. ಇಂಥ ಬೆಳೆಯ ವ್ಯವಸಾಯವನ್ನು ವಿದೇಶಗಳಿಗೆ ಸ್ಥಳಾಂತರಿಸುವುದು ದೋಷಪೂರ್ಣ ನೀತಿಯ ಹೆಜ್ಜೆಯಾಗಿದೆ. ಅಲ್ಲದೆ ರಾಷ್ಟ್ರೀಯ ಸರ್ವೇಕ್ಷಣ ಸಂಸ್ಥೆಯ ವರದಿಯ ಪ್ರಕಾರ ಶೇಕಡಾ ೪೦ರಷ್ಟು ರೈತರು ತಮಗೆ ಪರ್ಯಾಯ ಉದ್ಯೋಗ ದೊರೆಯುವುದಾದಲ್ಲಿ ವ್ಯವಸಾಯವನ್ನು ತೊರೆಯುವುದಾಗಿ ತಮ್ಮ ಅಭಿಪ್ರಾಯವನ್ನು ಸೂಚಿಸಿದ್ದಾರೆ. ಎಣ್ಣೆಬೀಜಗಳ ಉದಾಹರಣೆಯನ್ನೆ ತೆಗೆದುಕೊಳ್ಳಿ. ಕಳೆದ ಕೆಲವು ವರ್ಷಗಳ ಹಿಂದೆಯಷ್ಟೆ ಭಾರತವು ವಿಶ್ವದಲ್ಲಿಯೆ ಖಾದ್ಯ ಎಣ್ಣೆಯನ್ನು ಆಮದು ಮಾಡಿಕೊಳ್ಳುವ ಅತ್ಯಂತ ದೊಡ್ಡ ದೇಶವಾಗಿತ್ತು. ಇದರ ಅರ್ಥ ಮಧ್ಯಪ್ರದೇಶ ಮತ್ತು ಕರ್ನಾಟಕದಲ್ಲಿ ಎಣ್ಣೆಕಾಳುಗಳನ್ನು ಬೆಳೆಯುವ ರೈತರು ಯಾವುದೇ ಕಾರಣದಿಂದ ದಕ್ಷತೆಯುಳ್ಳವರಲ್ಲವೆಂದಲ್ಲ. ೧೯೮೭ – ೮೭ರಲ್ಲಿ ಮತ್ತು ೧೯೯೪ – ೯೫ರಲ್ಲಿ ಅವರು ಅತ್ಯಾಶ್ಚರ್ಯಕರವಾದ ರೀತಿಯಲ್ಲಿ ಎಣ್ಣೆಕಾಳಿನ ವ್ಯವಸಾಯ ಕ್ಷೇತ್ರದಲ್ಲಿ ಮತ್ತು ಉತ್ಪಾದನೆಯಲ್ಲಿ ದಾಖಲೆಯನ್ನುಂಟು ಮಾಡಿದ್ದಾರೆ. ೧೯೮೭ – ೮೭ನೇ ಸಾಲಿನಲ್ಲಿದ್ದ ಹತ್ತು ದಶಲಕ್ಷ ಟನ್ ಎಣ್ಣೆಬೀಜಗಳ ಉತ್ಪಾದನೆಯನ್ನು ೧೯೯೪ –೯೫ನೇ ಸಾಲಿನ ವೇಳೆಗೆ ೨೨ ದಶಲಕ್ಷ ಟನ್ ಎಣ್ಣೆಬೀಜಗಳ ಉತ್ಪಾದನೆಯನ್ನು

೧೯೯೪ - ೯೫ನೇ ಸಾಲಿನ ವೇಳೆಗೆ ೨೨ ದಶಲಕ್ಷ ಟನ್‌ಗಳ ಉತ್ಪಾದನೆ ಮಾಡಿ ದ್ವಿಗುಣಗೊಳಿಸಿದ್ದಾರೆ. ತನ್ಮೂಲಕ ಖಾದ್ಯ ಎಣ್ಣೆಯ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸುವಷ್ಟು ಮಟ್ಟಿಗೆ ಉತ್ಪಾದನೆ ಮಾಡಿದ್ದಾರೆ. ಮಾಜಿ ಪ್ರಧಾನಿ ರಾಜೀವ್‌ಗಾಂಧಿಯವರು ಎಣ್ಣೆಬೀಜಗಳ ಉತ್ಪಾದನೆ ಹೆಚ್ಚಿಸುವುದಕ್ಕಾಗಿ ಪ್ರೋತ್ಸಾಹಕೊಟ್ಟಿದ್ದರು. ೧೯೮೪ರಲ್ಲಿ ರಾಜೀವ್‌ಗಾಂಧಿಯವರು ಪ್ರಧಾನಿಯಾದ ಕೂಡಲೆ ಖಾದ್ಯ ಎಣ್ಣೆಯ ಆಮದಿನ ವೆಚ್ಚ ಹೆಚ್ಚಾಗುತ್ತಿರುವ ಬಗ್ಗೆ ತಮ್ಮ ಚಿಂತೆ ವ್ಯಕ್ತಪಡಿಸಿದ್ದರು. ಪೆಟ್ರೋಲ್ ಆಮದು ಮಾಡಿಕೊಳ್ಳುವುದು ಅರ್ಥವಾಗುತ್ತದೆ. ಏಕೆಂದರೆ ಭಾರತ ಸಾಕಷ್ಟು ಪ್ರಮಾಣದಲ್ಲಿ ಪೆಟ್ರೋಲ್ ಉತ್ಪಾದಿಸುತ್ತಿಲ್ಲ. ಆದರೆ ದೇಶದ ರೈತರು ಎಣ್ಣೆಬೀಜಗಳನ್ನು ಹೆಚ್ಚು ಹೆಚ್ಚು ಬೆಳೆಯುವಂತೆ ಮಾಡಲು ಸಾಧ್ಯವಿರುವಾಗ ಹಾಗೂ ತನ್ಮೂಲಕ ಆಮದು ವೆಚ್ಚವನ್ನು ಕಡಿಮೆ ಮಾಡಲು ಸಾಧ್ಯವಿರುವಾಗ ಭಾರತ ಖಾದ್ಯ ಎಣ್ಣೆಯನ್ನು ಏಕೆ ಆಮದು ಮಾಡಿಕೊಳ್ಳಬೇಕು ಎಂದು ರಾಜೀವ್‌ಗಾಂಧಿ ಕೇಳಿದ್ದರು.

ಎಣ್ಣೆಬೀಜಗಳ ಉತ್ಪಾದನೆಗಾಗಿ ಒಂದು ತಂತ್ರಜ್ಞಾನ ಆಯೋಗವನ್ನೆ ಸ್ಥಾಪಿಸಲಾಗಿದೆ. ಈ ಆಯೋಗವು ಎಣ್ಣೆಕಾಳುಗಳ ಉತ್ಪಾದನೆಗೆ ಅಗತ್ಯವಾದ ಸೂಕ್ತ ರೀತಿಯ ತಂತ್ರಜ್ಞಾನ ಮಾರುಕಟ್ಟೆಯ ಸೌಲಭ್ಯ ಮತ್ತು ತಕ್ಕ ಪರಿಸರವನ್ನು ಆ ಆಯೋಗ ಒದಗಿಸಿದೆ. ಆದ್ದರಿಂದ ಕೆಲವೇ ವರ್ಷಗಳಲ್ಲಿ ಎಣ್ಣೆಬೀಜಗಳ ವ್ಯವಸಾಯ ಮಾಡುವ ರೈತರು ದೇಶವನ್ನು ಖಾದ್ಯ ಎಣ್ಣೆಯ ಉತ್ಪಾದನೆಯಲ್ಲಿ ಸ್ವಾವಲಂಬಿತ ಮಾಡಿದರು. ಆನಂತರ ಎಲ್ಲವೂ ಇಳಿಮುಖವಾಗುತ್ತಾ ಹೋಯಿತು. ಇದಕ್ಕೆ ಕಾರಣ ಹೆಚ್ಚು ಉತ್ಪಾದನೆಯ ಗತಿಯನ್ನು ರೈತರಿಗೆ ಕಾಪಾಡಿಕೊಂಡು ಬರಲು ಸಾಧ್ಯವಾಗಲಿಲ್ಲ ಎಂಬ ಕಾರಣಕ್ಕಲ್ಲ. ಬದಲಿಗೆ ಸರ್ಕಾರವು ಉದ್ದೇಶಪೂರ್ವಕವಾಗಿ 'ಹಳದಿ ಕ್ರಾಂತಿ'ಯ ಲಾಭಗಳನ್ನು ನಾಶ ಮಾಡಿತು! ಇದುವರೆಗೂ ವಿವರಣೆ ಸಿಗದೆ ಇರುವ ಕಾರಣಗಳಿಂದಾಗಿ ೧೯೯೪ - ೯೫ರಿಂದ ಭಾರತ ಖಾದ್ಯ ಎಣ್ಣೆಯ ಆಮದನ್ನು ಉದಾರೀ ಕರಿಸುತ್ತಾ ಹೋಯಿತು. ಇದರ ಪರಿಣಾಮವಾಗಿ ಕಡಿಮೆ ಬೆಲೆಯ ಖಾದ್ಯ ಎಣ್ಣೆ ಮಲೇಷಿಯಾ, ಇಂಡೋನೇಷಿಯಾ ಮತ್ತು ಅಮೇರಿಕಾದಿಂದ ಹರಿದು ಬರಲು ಪ್ರಾರಂಭವಾಯಿತು. ದೇಶದ ಆಂತರಿಕ ಉತ್ಪಾದನಾ ಶಕ್ತಿ ಕ್ಷೀಣವಾಯಿತು. ಆದ್ದರಿಂದ ಎಣ್ಣೆ ಬೀಜಗಳ ವ್ಯವಸಾಯದ ಪ್ರದೇಶವೂ ಗಣನೀಯವಾಗಿ ಕಡಿಮೆ ಆಯಿತು. ಇನ್ನೂ ಆಮದು ಸುಂಕ ಆಗಾಗ್ಗೆ ಕಡಿಮೆಯಾಗುತ್ತಲೆ ಇದೆ. ಇದರಿಂದಾಗಿ ದೇಶದ ಖಾದ್ಯ ಎಣ್ಣೆ ಕೈಗಾರಿಕೆ ಆರ್ಥಿಕವಾಗಿ ನಷ್ಟವನ್ನನುಭವಿಸುತ್ತಿದೆ. ಖಾದ್ಯ ಎಣ್ಣೆಯ ಆಮದಿನಿಂದ ಅನೇಕ ಜನರ ಜೀವನ ದುರ್ಬಲವಾದ್ದರಿಂದ ಎಣ್ಣೆ ಬೀಜಗಳ ವ್ಯವಸಾಯದ ಬಹಳಷ್ಟು ರೈತರು ಆ ವ್ಯವಸಾಯವನ್ನೇ ಬಿಡಲು ಪ್ರಾರಂಭಿಸಿದರು ಮತ್ತು ಕೆಲವರು ಆತ್ಮಹತ್ಯೆ ಮಾಡಿಕೊಂಡರು. ೧೯೯೭ - ೯೮ರಲ್ಲಿ ಆಮದು ಮಾಡಿಕೊಳ್ಳಲಾದ ೧೦.೨ ದಶಲಕ್ಷ ಟನ್‌ಗಳ ಜೊತೆಗೆ ಈಗಿನ ಖಾದ್ಯ ಎಣ್ಣೆಯ ಆಮದನ್ನು ಹೋಲಿಕೆ ಮಾಡಿದರೆ ಪ್ರತಿವರ್ಷ ಸುಮಾರು ಐದು ದಶಲಕ್ಷ ಟನ್ ಸರಾಸರಿ ಇರುತ್ತದೆ. ಇಂದು ಆಮದಿನ ವೆಚ್ಚ ೯೪೮೧೬ ಕೋಟಿಯಷ್ಟು ಹೃದಯಾಘಾತಕ ಸ್ಥಿತಿಗೆ ಮುಟ್ಟಿದೆ. ಇದಕ್ಕೆ ವ್ಯತಿರಿಕ್ತವಾಗಿ ಸರ್ಕಾರವು ಈ ಮೊತ್ತದ ಅರ್ಧದಷ್ಟನ್ನು ಅಂದರೆ ೪೫೦೦ ಕೋಟಿಯನ್ನು ಪ್ರತಿವರ್ಷ ರೈತರ ಕೈಗೆ ಕೊಟ್ಟಿದ್ದರೆ ಲಕ್ಷಾವಧಿ ರೈತರನ್ನು

ಮಳೆಯಾಶ್ರಿತ ವ್ಯವಸಾಯ ಕ್ಷೇತ್ರದಿಂದ ಹೊರತರಬಹುದಾಗಿತ್ತು.

ಬೇಳೆಕಾಳುಗಳ ಕಥೆ ಸ್ವಲ್ಪ ಭಿನ್ನವಾಗಿದೆ. ಅದು ಹೆಚ್ಚಾಗಿ ಉದಾಸೀನತೆ ಮತ್ತು ನಿರ್ಲಕ್ಷತೆಯ ಉದಾಹರಣೆಯಾಗಿದೆ. ಹಸಿರು ಕ್ರಾಂತಿಯ ದಿನಗಳಿಂದ ವ್ಯವಸಾಯ ಕ್ಷೇತ್ರದ ವಿಜ್ಞಾನಿಗಳು ಮತ್ತು ನೀತಿ ನಿರ್ಧಾರಕರು ಉದ್ದೇಶ ಪೂರ್ವಕವಾಗಿ ಬೇಳೆಕಾಳುಗಳನ್ನು ಮರೆತಿದ್ದಾರೆ. ಈಗ್ಗೆ ೪೦ ವರ್ಷಗಳಿಂದ ಪೌಷ್ಟಿಕ ಆಹಾರದ ಈ ಬೆಳೆಯ ಉತ್ಪಾದನೆ ಒಂದು ವರ್ಷಕ್ಕೆ ೧೩ ರಿಂದ ೧೬ ದಶಲಕ್ಷ ಟನ್‌ಗಳ ಸುತ್ತಮುತ್ತ ಸುಳಿದಾಡುತ್ತಿದೆ. ಇದರಲ್ಲಿ ರೈತರದು ತಪ್ಪಿಲ್ಲ. ಕಡಿಮೆ ಉತ್ಪಾದನೆಯ ಸಾಮರ್ಥ್ಯವುಳ್ಳ ಈ ಬೆಳೆ ಹೆಚ್ಚಾಗಿ ಸಣ್ಣ ಹಿಡುವಳಿದಾರರದ್ದಾಗಿದೆ. ಅಲ್ಲದೆ ಬೆಳೆಗಾರರಿಗೆ ಸಾಕಷ್ಟು ಪ್ರೋತ್ಸಾಹವೂ ಇಲ್ಲದಾಗಿದೆ.

ದುರ್ದೈವದ ಸಂಗತಿಯೇನೆಂದರೆ ಆಸ್ಟ್ರೇಲಿಯಾ ೧೯೭೦ ರ ದಶಕಗಳಲ್ಲಿ ಕೇವಲ ೪೫೦ ಗ್ರಾಂ ಬೇಳೆಕಾಳುಗಳನ್ನು ಪಡೆದಿತ್ತು. ಕೆಲವೇ ವರ್ಷಗಳಲ್ಲಿ ಆ ದೇಶ ಒಂಭತ್ತು ದಶಲಕ್ಷ ಹೆಕ್ಟೇರ್ ಪ್ರದೇಶವನ್ನು ಬೇಳೆಕಾಳಿನ ವ್ಯವಸಾಯಕ್ಕೆ ಒಳಪಡಿಸಿತು. ಆಸ್ಟ್ರೇಲಿಯಾ ಪ್ರಾರಂಭದಲ್ಲಿ ಆಫ್ರಿಕಾಕ್ಕೆ ಬೇಳೆಕಾಳುಗಳನ್ನು ರಫ್ತು ಮಾಡಿತು. ಆನಂತರ ಭಾರತಕ್ಕೆ, ಅದೇ ರೀತಿ ಕೆನಡಾ ಕೂಡ ಮಾಡಿತು. ಆ ದೇಶವು ಅವರೆಕಾಳನ್ನು ಬಳಸುವುದಿಲ್ಲ ಆದ್ದರಿಂದ ಬಹಳ ದೊಡ್ಡ ಕ್ಷೇತ್ರವನ್ನು ಬೇಳೆಕಾಳುಗಳ ವ್ಯವಸಾಯಕ್ಕೆ ಒಳಪಡಿಸಿತು. ಹಾಗೆ ಮಾಡುವಾಗ ಅದು ಭಾರತದ ಮಾರುಕಟ್ಟೆಯನ್ನೇ ತನ್ನ ದೃಷ್ಟಿಯ ಕೇಂದ್ರ ಬಿಂದುವನ್ನಾಗಿಟ್ಟುಕೊಂಡಿತ್ತು. ಈಗ ಆಸ್ಟ್ರೇಲಿಯಾ ಮತ್ತು ಕೆನಡಾ ಈ ಎರಡೂ ದೇಶಗಳು ಭಾರತಕ್ಕೆ ಬೇಳೆಕಾಳುಗಳನ್ನು ರಫ್ತು ಮಾಡುವ ಪ್ರಮುಖ ದೇಶಗಳಾಗಿವೆ. ವೈರುಧ್ಯವೇನೆಂದರೆ ರಾಷ್ಟ್ರೀಯ ಆಹಾರ ಭದ್ರತಾ ಯೋಜನೆಯ ಅಂಗವಾಗಿ ೪೮೮೩ ಕೋಟಿ ಮೊತ್ತದ ಹಣವನ್ನು ರೈತರಿಗೆ ಬಿಡುಗಡೆ ಮಾಡುತ್ತಿರುವ ಸಂದರ್ಭದಲ್ಲಿಯೇ ನೆರೆದೇಶಗಳಿಗೆ ವ್ಯವಸಾಯವನ್ನು ಸ್ಥಳಾಂತರಿಸುವ ನೀತಿ ಜಾರಿಗೆ ಬರುತ್ತಿದೆ. ಈ ರಾಷ್ಟ್ರೀಯ ಆಹಾರ ಭದ್ರತಾ ಯೋಜನೆಯ ಉದ್ದೇಶ ಗೋಧಿ, ಭತ್ತ, ಎಣ್ಣೆಕಾಳುಗಳು ಮತ್ತು ಬೇಳೆಕಾಳುಗಳ ಉತ್ಪಾದನೆಯನ್ನು ಹೆಚ್ಚಿಸುವುದಾಗಿದೆ. ತುಂಬಾ ವಿರೋಧಾಭಾಸದ ನೀತಿಗಳನ್ನು ವ್ಯವಸಾಯ ಕ್ಷೇತ್ರದಲ್ಲಿ ಜಾರಿಗೆ ತರಲಾಗುತ್ತಿದೆ. ಬಹುಶ ಃ ಇದಕ್ಕೆ ಕಾರಣ ಹಿತಾಸಕ್ತಿಗಳನ್ನು ತೃಪ್ತಿಗೊಳಿಸುವುದೆ ಆಗಿದೆ. ಈ ಒಂದು ಸ್ಥಿತಿಯಲ್ಲಿ ರೈತರಿಗೇನು ಸಂಭವಿಸುತ್ತದೆ ಮತ್ತು ಆಹಾರ ಭದ್ರತೆಗೆ ಏನು ಸಂಭವಿಸುತ್ತದೆ ಎನ್ನುವುದು ಯಾರ ಚಿಂತೆಯ ವಿಷಯ ಆಗಿಲ್ಲ.

ಪ್ರಧಾನಮಂತ್ರಿ ಮನಮೋಹನ್ ಸಿಂಗ್‌ರವರು ತುಂಬಾ ಗಡಿಬಿಡಿಯ ಗುಂಡನಾಗಿದ್ದಾರೆ. ಯು.ಪಿ.ಎ ಮೈತ್ರಿ ಸರ್ಕಾರವು ಯಾವುದೇ ಗಳಿಗೆಯಲ್ಲಿ ವಿಘಟಿತವಾಗುತ್ತದೆಂದು ಗೊತ್ತಿದ್ದರೂ ಪ್ರಧಾನಮಂತ್ರಿಯವರು ವ್ಯಾಪಾರಿ ಕಂಪನಿಗಳ ಹಿಡಿತಕ್ಕೆ ವ್ಯವಸಾಯ ಮತ್ತು ಕೃಷಿಯನ್ನು ಒಳಪಡಿಸುವ ವ್ಯವಸ್ಥೆಗೆ ಸುಭದ್ರ ಬುನಾದಿಯನ್ನು ಹಾಕುವತ್ತ ವೇಗವಾಗಿ ಚಲಿಸುತ್ತಿದ್ದಾರೆ. ಹಿಂದಿನ ಎನ್.ಡಿ.ಎ ಮೈತ್ರಿ ಸರ್ಕಾರ ರೂಪಿಸಿದ್ದ ಗ್ರಾಮೀಣ ವಿರೋಧಿ ನೀತಿಗಳಿಗಾಗಿ ಮತ್ತು ವ್ಯವಸಾಯ ಕ್ಷೇತ್ರವು ಯಾವ ತೊಂದರೆಗಳಿಂದ ಬಳಲುತ್ತಿದೆಯೆಂಬುದನ್ನು ತಿಳಿಯಲು ಅಸಮರ್ಥವಾದುದಕ್ಕಾಗಿ ರೈತರು ಮತ್ತು ಗ್ರಾಮೀಣರು ಎನ್.ಡಿ.ಎ. ಸರ್ಕಾರವನ್ನು ಅಧಿಕಾರದಿಂದ ತೆಗೆದು ಹಾಕಿದ್ದು ಸರಿಯಷ್ಟೆ.

ಈಗ ಆ ರೈತರ ಮತ್ತು ಗ್ರಾಮೀಣರ ಮತಗಳ ಬಗ್ಗೆ ಆಸೆಯನ್ನಿಟ್ಟುಕೊಂಡು ಪ್ರಧಾನಮಂತ್ರಿಯವರು ವಿಶ್ವಬ್ಯಾಂಕ್ ಪ್ರಸ್ತಾಪಿಸಿರುವ ಕೃಷಿ ಬೆಳವಣಿಗೆಯ ಉಪಾಯಗಳನ್ನು ತ್ವರಿತವಾಗಿ ಅನ್ವಯಿಸಿಕೊಳ್ಳುವುದಕ್ಕೆ ದೃಢ ಸಂಕಲ್ಪಿತರಾಗಿದ್ದಾರೆ. ಅದನ್ನು ನೀವು ಎರಡನೆ ಹಸಿರುಕ್ರಾಂತಿಯೆಂದಾಗಲಿ ಅಥವಾ 'ವರ್ಣರಂಜಿತ' ಕ್ರಾಂತಿ ಎಂದಾಗಲಿ ಕರೆಯಿರಿ. ಸರ್ಕಾರ ಮಾತ್ರ ಕೃಷಿ ವಾಣಿಜ್ಯದ ಹೆದ್ದಾರಿಯಲ್ಲಿ ವೇಗವಾಗಿ ಚಲಿಸುತ್ತಿದೆ. ಹಿಂದಿನ ಎನ್.ಡಿ.ಎ. ಸರ್ಕಾರ ರೂಪಿಸಿದ್ದ ನೀತಿಗಳಿಂದ ವಿಶೇಷವಾಗಿ ದೂರ ಚಲಿಸದೆ ಈಗಿನ ಯು.ಪಿ.ಎ. ಸರ್ಕಾರವು ವಾಣಿಜ್ಯ ಹಿತಾಸಕ್ತಿಯ ಕೃಷಿಯು ಪರಂಪರಾಗತ ವ್ಯವಸಾಯವನ್ನು ತನ್ನ ಹತೋಟಿಗೆ ತೆಗೆದುಕೊಳ್ಳಬಹುದಾದಂಥ ನೀತಿಯನ್ನು ಗಡುಸಾಗಿ ಜಾರಿಗೆ ತರುತ್ತಿದೆ. ಆ ನೀತಿಗನುಸಾರವಾಗಿ ಕೈಗಾರಿಕೆಗಳು ಗ್ರಾಮಾಂತರ ಪ್ರದೇಶಕ್ಕೆ ಸುಲಭವಾಗಿ ಹೋಗುವಂತೆ ಮಾಡುವ ಅನೇಕ ಪ್ರಕಾರದ ರಾಷ್ಟ್ರೀಯ ನೀತಿಗಳನ್ನು ಮತ್ತು ಕಾನೂನುಗಳನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿದ್ದರೆ ಅದಕ್ಕಾಗಿ ನಾವು ಆಶ್ಚರ್ಯಪಡಬೇಕಾಗಿಲ್ಲ. ಮಾರುಕಟ್ಟೆಯ ವಿವಿಧ ಒತ್ತಡಗಳಿಗೆ ಅನುಗುಣವಾಗಿ ಕಂಪನಿಗಳು ಹೊಂದಿಕೊಳ್ಳುವಂತೆ ಸೂಕ್ತವಾದ ಅನೇಕ ಹೊಸ ರಾಷ್ಟ್ರೀಯ ನೀತಿಗಳ ಕರಡುಗಳನ್ನು ತಯಾರಿಸಲಾಗುತ್ತಿದೆ. ಇಲ್ಲವೆ ಹಳೆಯದಕ್ಕೆ ಹೊಸ ರೂಪವನ್ನು ಕೊಡಲಾಗುತ್ತಿದೆ. ಇವುಗಳಲ್ಲಿ ರಾಷ್ಟ್ರೀಯ ಪರಿಸರ ನೀತಿ, ರಾಷ್ಟ್ರೀಯ ಕೃಷಿನೀತಿ, ಆಹಾರ ಸಂಸ್ಕರಣ ನೀತಿ, ರಾಷ್ಟ್ರೀಯ ಆರೋಗ್ಯ ನೀತಿ, ಮತ್ತು ರಾಷ್ಟ್ರೀಯ ಗಿರಿಜನ ನೀತಿ ಮುಂತಾದವು ಇವೆ. ಇನ್ನೂ ಅನೇಕ ಮಸೂದೆಗಳು ಭಟ್ಟಿಯಲ್ಲಿವೆ. ಉದ್ದೇಶಿತ ಬೀಜ ಮಸೂದೆ, ಆಹಾರ ಭದ್ರತೆ ಮತ್ತು ಮೌಲ್ಯ ಮಸೂದೆ ಮತ್ತು ಗಿರಿಜನರ ಅರಣ್ಯ ಹಕ್ಕುಗಳ ಮಾನ್ಯತಾ ಮಸೂದೆ ಮುಂತಾದವು ಶಾಸನವಾಗುವುದಕ್ಕಾಗಿ ಸಾಲುಗಟ್ಟಿ ನಿಂತಿರುವ ಮಸೂದೆಗಳು. ಈಗಾಗಲೆ ಹಲವಾರು ಶಾಸಕೀಯ ಸುಧಾರಣೆಗಳನ್ನು ವ್ಯವಸಾಯೋತ್ಪನ್ನ ಮಾರುಕಟ್ಟೆ ಕ್ಷೇತ್ರ (ಎ.ಪಿ.ಎಂ.ಸಿ), ಅಗತ್ಯ ವಸ್ತುಗಳ ಕಾನೂನು ಮತ್ತು ಭವಿಷ್ಯ ಗುತ್ತಿಗೆ ಕಾನೂನು ಮುಂತಾದ ವಲಯಗಳಲ್ಲಿ ಜಾರಿಗೆ ತರುವ ಹುನ್ನಾರ ನಡೆಯುತ್ತಿದೆ. ಈಗಾಗಲೆ ಆರು ರಾಜ್ಯಗಳು ಎ.ಪಿ.ಎಂ.ಸಿ ಕಾನೂನಿಗೆ ಸಂಬಂಧಿಸಿದಂತೆ ಕ್ರಮಗಳನ್ನು ಕೈಗೊಂಡಿವೆ. ಇದೇ ರೀತಿ ಉಳಿದ ರಾಜ್ಯಗಳು ಇಷ್ಟರಲ್ಲಿಯೆ ಮುಂದುವರಿಯಲಿವೆ. ಈ ಎಲ್ಲವು ಖಾಸಗಿ ವಲಯ ಹಣ ತೊಡಗಿಸುವುದಕ್ಕೆ ಅನುಕೂಲ ಮಾಡಿಕೊಡುವ ಉದ್ದೇಶವನ್ನೇ ಹೊಂದಿವೆ. ಉಗ್ರಾಣ ಸಂಬಂಧಿ ವ್ಯವಸ್ಥೆ ಮತ್ತು ಉನ್ನತ ಮಟ್ಟದ ಸಮಿತಿಗಳ ರಚನೆ ಎಲ್ಲವೂ ಕೈಗಾರಿಕೆಗೆ ಅನುಕೂಲ ಮಾಡಿಕೊಡುವ ಉದ್ದೇಶವನ್ನೆ ಹೊಂದಿವೆ. ಉದಾಹರಣೆಗೆ ಗಣಿಗಳ ಪರಿಸರದ ಮೇಲಿನ ಪರಿಣಾಮವನ್ನು ಮೌಲ್ಯಮಾಪನ ಮಾಡುವ ಬಗ್ಗೆ ರಚಿತವಾಗಿರುವ ತಜ್ಞರ ಸಮಿತಿಯನ್ನೇ ತೆಗೆದುಕೊಳ್ಳಿ. ಈ ಸಮಿತಿಯನ್ನು ಪರಿಸರ ಮತ್ತು ಅರಣ್ಯ ಮಂತ್ರಾಲಯ ರಚನೆ ಮಾಡಿದೆ. ಈ ಸಮಿತಿ ಪರಿಸರದ ನಿಯಮಗಳನ್ನು ಮುರಿಯುವಂಥ ಕೈಗಾರಿಕೆಗಳ ಬಗ್ಗೆ ಮತ್ತು ಅಭಿವೃದ್ಧಿ ಯೋಜನೆಗಳಿಗೆ ಅನುಮತಿ ಕೊಡುವ ಅಥವಾ ಕೊಡದೆ ಇರುವ ಬಗ್ಗೆ ಸಲಹೆಯನ್ನು ಕೊಡುತ್ತದೆ. ಈ ಸಮಿತಿಯಲ್ಲಿ ಅಧಿಕಾರಿಗಳ, ರಾಜಕಾರಣಿಗಳ ಮತ್ತು ಅಭಿಯಂತರರ ಭರಾಟೆಯೇ ಹೆಚ್ಚಾಗಿದೆ.

ಅದೇ ರೀತಿಯ ರಾಷ್ಟ್ರೀಯ ಜೈವಿಕ ತಂತ್ರಜ್ಞಾನಕ್ಕೆ ಸಂಬಂಧಿಸಿದ ರಣನೀತಿಯ

ಕರಡನ್ನು ಜೈವಿಕ ತಂತ್ರಜ್ಞಾನದ ಮುಖಂಡರು ಮತ್ತು ಅದರ ಪರವಾಗಿರುವಂಥ ವಿಜ್ಞಾನಿಗಳ ಸಲಹೆಯ ಮೇರೆಗೆ ರಚಿಸಲಾಯಿತು. ಯಾವ ವೇಗದಲ್ಲಿ ಈ ನೀತಿಗಳನ್ನು ಮತ್ತು ಮಸೂದೆಗಳನ್ನು ಸಂಸತ್ತಿನಲ್ಲಿ ಮಂಡಿಸಲಾಗುತ್ತಿದೆಯೊ ಅದು ಭಾರತದ ಇತಿಹಾಸದಲ್ಲಿ ಅಭೂತಪೂರ್ವವಾಗಿದೆ. ಈ ಎಲ್ಲ ನೀತಿ ಮತ್ತು ಮಸೂದೆಗಳ ಬಗ್ಗೆ ರಾಷ್ಟ್ರಮಟ್ಟದಲ್ಲಿ ಯಾವುದೇ ಚರ್ಚೆ ನಡೆದಿರುವುದಿಲ್ಲ. ಅಲ್ಲದೆ ಬೆಳೆಯುತ್ತಿರುವ ನಗರಗಳ ಹೃದಯ ಭಾಗದಲ್ಲಿರುವ ಮುಖ್ಯ ಪ್ರದೇಶವನ್ನು ರಾಜ್ಯ ಸರ್ಕಾರಗಳು ಜೈವಿಕ ತಂತ್ರಜ್ಞಾನ ವಸಾಹತುಗಳಿಗಾಗಿ ದಯಪಾಲಿಸುತ್ತಿರುವುದು ಗಮನೀಯವಾಗಿದೆ. ವಾಸ್ತವವಾಗಿ ಯಾವ ರಿಯಾಯಿತಿ ಗ್ರಾಮೀಣ ಪ್ರದೇಶಗಳಿಗೆ ಹೋಗಬೇಕಾಗಿತ್ತೋ ಅದನ್ನು ಮೂಲಭೂತ ಸೌಕರ್ಯಗಳ ಅಭಿವೃದ್ಧಿಯ ನೆಪದಲ್ಲಿ ಖಾಸಗಿ ವಲಯಕ್ಕೆ ಹರಿಸಲಾಗುತ್ತಿದೆ.

ಜಾಗತಿಕ ಮಟ್ಟದಲ್ಲಿ ಹೇಳುವುದಾದರೆ ಸರ್ಕಾರವು ಸೆಪ್ಟಂಬರ್ ೨೦೦೩ರಲ್ಲಿ ಕಾನ್‌ಕ್ಯಾನ್‌ನಲ್ಲಿ ನಡೆದ ವಿಶ್ವ ವಾಣಿಜ್ಯ ಸಂಸ್ಥೆಯ ಸಚಿವರ ಸಭೆಯು ವಿಫಲವಾದ ನಂತರ ನಮ್ಮ ಸರ್ಕಾರ ಸರಿಯಾದ ಸಂದೇಶವನ್ನೆ ಕಳುಹಿಸಿದೆ. ಅಂದರೆ ಇದುವರೆಗೆ ಏನೆಲ್ಲ ಸಾಧನೆಯಾಗಿತ್ತೊ ಅದಕ್ಕೆ ತದ್ವಿರುದ್ಧವಾದ ನೀತಿಯನ್ನು ಸರ್ಕಾರವು ಅನುಸರಿಸಿತು. ಆದರೆ ೨೦೦೪ರಲ್ಲಿ ಒಂದು ವಿವಾದಾಸ್ಪದ ಒಪ್ಪಂದವಾಯಿತು. ಈ ಒಪ್ಪಂದಕ್ಕೆ ಸರ್ಕಾರ ತನ್ನ ಸಮ್ಮತಿಯನ್ನು ಕೊಟ್ಟಿತು. ಈ ವಿವಾದಾಸ್ಪದ ಒಪ್ಪಂದವೇನೆಂದರೆ ಶ್ರೀಮಂತ ಮತ್ತು ಕೈಗಾರೀಕೃತಗೊಂಡ ದೇಶಗಳು ತಮ್ಮ ಅಗಾಧವಾದ ಕೃಷಿ ರಿಯಾಯಿತಿಗಳನ್ನು ಹೆಚ್ಚಿಸಬೇಕೆಂಬುದೇ ಆಗಿತ್ತು. ಈ ವಿವಾದಾಸ್ಪದ ಒಪ್ಪಂದದ ಸಮರ್ಥನೆ ಒಂದು ರೀತಿಯಲ್ಲಿ ಅಭಿವೃದ್ಧಿಶೀಲ ದೇಶಗಳಿಗೆ ಹಿನ್ನಡೆಯಾದಂತೆ ಮತ್ತು ಆ ದೇಶಗಳಲ್ಲಿಯ ಲಕ್ಷಾಂತರ ಜನ ರೈತರ ಆಹಾರ ಭದ್ರತೆ ಮತ್ತು ಜೀವನಕ್ಕೆ ಅಪಾಯವನ್ನು ತಂದಂತೆ. ಈ ಸಂಬಂಧವಾಗಿ ಉಂಟಾದ ಸಾರ್ವಜನಿಕರ ಪ್ರತಿಭಟನೆಗೆ ಪ್ರತಿಕ್ರಿಯಿಸದೆ ವಾಣಿಜ್ಯ ಮಂತ್ರಾಲಯವು ಒಂದು ಹೇಳಿಕೆ ಮಾತ್ರ ಹೊರಡಿಸಿ ಆ ವಿವಾದಾತ್ಮಕ ಒಪ್ಪಂದ ದೇಶದ ಹಿತಕ್ಕಾಗಿಯೆ ಇದೆ ಎಂದು ತಿಳಿಸಿತು. ಇದು ಸಾಲದೆಂಬಂತೆ ಅನಗತ್ಯವಾದ ಆತುರದಿಂದ ಕೇಂದ್ರ ಸರ್ಕಾರವು ೧೯೭೦ರ ಪೇಟೆಂಟ್ ಶಾಸನಕ್ಕೆ ವಿವಾದವನ್ನುಂಟುಮಾಡುವ ಮೂರನೆ ತಿದ್ದುಪಡಿಯನ್ನು ಮಾಡಿತು. ತನ್ಮೂಲಕ ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಗಳಿಗೆ ಸೂಕ್ತ ಸಂದೇಶವನ್ನು ರವಾನಿಸಿತು. ಭಾರತೀಯ ರೈತರಿಗೆ ಮತ್ತು ಬಳಕೆದಾರರಿಗೆ ಈ ಒಂದು ವ್ಯವಹಾರದಲ್ಲಿ ಏನೋ ಸಂಭವಿಸುತ್ತದೆಂಬುದು ಸರ್ಕಾರದ ಚಿಂತನೆಗೆ ಒಳಪಡಲಿಲ್ಲ. ಇಲ್ಲಿ ವಿರೋಧಾಭಾಸದ ಸಂಗತಿಯೇನೆಂದರೆ ಇದೆಲ್ಲವನ್ನು ಸರ್ಕಾರವು ಮಾನವೀಯತೆಯ ದೃಷ್ಟಿ ಹೊಂದಿದ ಸುಧಾರಣೆಗಳನ್ನು ಮಾಡುತ್ತಿರುವುದಾಗಿ ಇಂಥ ಕ್ರಮಗಳನ್ನು ಕೈಗೊಂಡಿರುವುದೆಂದು ಹೇಳುತ್ತಲೇ ಮಾಡಿರುವುದು.

ಈ ನೀತಿಗಳ ಪರಿಣಾಮಗಳನ್ನು ಕುರಿತು ನೋಡುವ ಮುನ್ನ ಭಾರತದ ವ್ಯವಸಾಯವು ಯಾವ ಪ್ರಕಾರದ ತೊಂದರೆಗಳಿಂದ ನರಳುತ್ತಿದೆ ಎಂಬುದನ್ನು ತಿಳಿಯಬೇಕು. ೧೧೦ ದಶಲಕ್ಷ ರೈತರಲ್ಲಿ ೧.೫ ಹೆಕ್ಟೇರ್‌ಗಿಂತ ಕಡಿಮೆ ಹಿಡುವಳಿ ಹೊಂದಿದಂಥ ರೈತರು ಶೇಕಡಾ ೮೦ಕ್ಕಿಂತಲೂ ಹೆಚ್ಚಿದ್ದಾರೆ. ಸುಸ್ಥಿರವಲ್ಲದ ಕೃಷಿ ಪದ್ಧತಿಯಿಂದಾಗಿ ದೇಶದ ಉತ್ಪಾದಕ ಮತ್ತು ಫಲವತ್ತಾದ ಪ್ರದೇಶವು ಮರಳುಗಾಡಾಗಿ ಪರಿವರ್ತಿತವಾಗುತ್ತಿದೆ.

ವ್ಯವಸಾಯವು ತುಂಬಾ ಹಾನಿಕರ ಮತ್ತು ಅನುತ್ಪಾದಕವಾಗಿದೆ. ಸಂಪನ್ಮೂಲದ ಮೂಲ ಅಡಿಪಾಯದ ಸತತ ವಿನಾಶದಿಂದಾಗಿ ಸುಸ್ಥಿರ ವ್ಯವಸಾಯದ ತಳಹದಿ ಅತಿಯಾದ ರಾಸಾಯನಿಕ ಗೊಬ್ಬರ ಮತ್ತು ಕ್ರಿಮಿನಾಶಕಗಳಿಂದಾಗಿ ಕ್ಷೀಣಗೊಂಡಿದೆ. ಇದು ಸಾಲದೆಂಬಂತೆ ಅಂತರ್ಜಲದ ಅತಿಯಾದ ಬಳಸುವಿಕೆ ಈ ಕ್ಷೀಣತೆಯ ಗತಿಯನ್ನು ಹೆಚ್ಚಿಸಿದೆ. ಕೃಷಿ ಹಿಂದೆಂದೂ ಇಲ್ಲದಷ್ಟು ಗಂಡಾಂತರವನ್ನು ಎದುರಿಸುತ್ತಿದೆ.

ದುರಾದೃಷ್ಟವಶಾತ್ ಕೃಷಿಗೆ ಏನು ತೊಂದರೆಯಾಗಿದೆ ಎಂಬುದನ್ನು ಮೊದಲು ಖಚಿತಪಡಿಸಿಕೊಳ್ಳದೆ ಸರ್ಕಾರವು ಉದ್ದೇಶಪೂರ್ವಕವಾಗಿ ನಿಜವಾದ ಸಂಗತಿಯನ್ನು ಮುಚ್ಚಿಹಾಕುತ್ತಿದೆ. ಹಸಿರುಕ್ರಾಂತಿಯ ಮಾದರಿ ಬಿದ್ದು ಹೋಯಿತು ಎಂಬುದನ್ನು ಸರ್ಕಾರ ಒಪ್ಪಿಕೊಳ್ಳುತ್ತಿಲ್ಲವೆಂಬುದು ಇದಕ್ಕೆ ಸಾಕ್ಷಿಯಾಗಿದೆ. ಆ ಹಸಿರುಕ್ರಾಂತಿಯ ವಿಫಲತೆಯೆ ರೈತರ ಸಂಕಷ್ಟಗಳಿಗೂ ಮತ್ತು ಆತ್ಮಹತ್ಯೆಗಳಿಗೂ ಕಾರಣವಾಗಿದೆ ಎಂಬುದು ಕೂಡ ಇದಕ್ಕೆ ಸಾಕ್ಷಿಯಾಗಿದೆ. ನೀತಿ ನಿರ್ಧಾರಕರು ತಮ್ಮ ಹೊಣೆಗಾರಿಕೆಯಿಂದ ಜಾರಿಕೊಳ್ಳುತ್ತಿದ್ದಾರೆ. ಹತ್ತನೆ ಪಂಚವಾರ್ಷಿಕ ಯೋಜನೆಯು ಕೃಷಿ ಉತ್ಪನ್ನ ಶೇಕಡಾ ೪ರಷ್ಟು ಪ್ರಮಾಣದಲ್ಲಿ ವೃದ್ಧಿಯಾಗುವುದೆಂದು ಗ್ರಹಿಸಿತ್ತು. ಸತ್ಯಸಂಗತಿಯೇನೆಂದರೆ ಆ ಯೋಜನೆಯ ಕೊನೆಯ ಮೂರು ವರ್ಷಗಳಲ್ಲಿ ಕೃಷಿ ಉತ್ಪನ್ನವು ಶೇಕಡಾ ೧.೫ರಷ್ಟು ಸಹ ವೃದ್ಧಿಗೊಳ್ಳಲಿಲ್ಲ. ದುರ್ದೈವವೇನೆಂದರೆ ಪ್ರಧಾನಮಂತ್ರಿಯವರು ತಮ್ಮ ಹೆಚ್ಚಿನ ಸಮಯವನ್ನು ಕೃಷಿಯ ಕಾಯಕಲ್ಪಕ್ಕಾಗಿ ಕೈಗಾರಿಕೆಗಳ ಮುಖ್ಯಸ್ಥರೊಂದಿಗೆ ಕಳೆದಿದ್ದಾರೆ. ಇದಕ್ಕೆ ಬದಲಾಗಿ ಪ್ರಧಾನಮಂತ್ರಿಯವರು ಮತ್ತು ಅವರ ಸಹೋದ್ಯೋಗಿಗಳು ಹಳ್ಳಿ ಹಳ್ಳಿಗೆ ಹೋಗಿ ಮತ್ತು ರೈತರನ್ನು ಭೇಟಿಮಾಡಿ ಕೃಷಿ ಕ್ಷೇತ್ರದಲ್ಲಿಯ ಸಂಕಷ್ಟವನ್ನು ಹೇಗೆ ದೂರಮಾಡಬಹುದುದೆಂಬುದನ್ನು ತಿಳಿದಿದ್ದರೆ ದೇಶದ ಹಳ್ಳಿಗಳು ಬಹು ಸ್ಪಷ್ಟವಾಗಿ ಬೇರೆ ರೀತಿಯಾಗಿಯೆ ಇರುತ್ತಿದ್ದವು. ಆದರೆ ಚಿಂತಿಸುವವರು ಯಾರು?

– ಅನು : ಸು.ಕೌ (ಸಾಭಾರ : ಡೆಕ್ಕನ್ ಹೆರಾಲ್ಡ್)

ಸನ್ಮಾನ್ಯರಿಂದ

ಫೆಬ್ರವರಿ ೨೦೦೮ರ ತಿಂಗಳ ವೈಚಾರಿಕ ಡೈಜೆಸ್ಟ್ 'ಜನಪದ ವಿಚಾರ' ಓದಿ ಆನಂದಿಸಿದೆ. ಎಲ್ಲ ಲೇಖನಗಳೂ ಚಿಂತನ ಮಂಥನ ಯೋಗ್ಯವಾಗಿವೆ.

ಮಹಾತ್ಮಾ ಗಾಂಧೀಜಿಯವರ ಸರ್ವೋದಯ ತತ್ವ ಸಿದ್ಧಾಂತಗಳು ಮಾನವನ ಸರ್ವತೋಮುಖ ಏಳಿಗೆಗೆ ಇಂದಿಗೂ ಎಂದೆಂದಿಗೂ ಪ್ರಸ್ತುತ ಎನ್ನುವ ವಿಚಾರವನ್ನು ಇಡೀ ಹಿಂದೂಸ್ತಾನದಲ್ಲಿ ಯುವ ಪೀಳಿಗೆಯ ಮುಂದೆ ಮಂಡಿಸಿ ಬಂದಿದ್ದೇನೆ ಎಂದು ಹೇಳಲು ಹೆಮ್ಮೆ ಎನಿಸುತ್ತದೆ.

– ಶ್ರೀ ಕೆ.ಸಿ.ಲಕ್ಷ್ಮೀನರಸಯ್ಯ
(ಅಖಿಲ ಭಾರತ ಪಾದಯಾತ್ರಿ) ತುಮಕೂರು

ಜನಪದ ಧ್ವನಿ

ಮಾಯಾವತಿಯವರ ರಾಜಕಾರಣ

ದಲಿತ ವರ್ಗಕ್ಕೆ ಸೇರಿದ ರೈಲ್ವೆ ಇಲಾಖೆಯ ಕೆಳದರ್ಜೆಯ ನೌಕರರೊಬ್ಬರ ಮಗಳಾದ ಮಾಯಾವತಿಯವರು ದೇಶದ ಅತಿದೊಡ್ಡ ರಾಜ್ಯವಾದ ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದು ನಿಜವಾಗಿಯೂ ನಾವೆಲ್ಲರೂ ಸಂತೋಷಪಡಬೇಕಾದ, ಹೆಮ್ಮೆ ಪಡಬೇಕಾದ ವಿಷಯ. ಇವರು ಮಾಡಬೇಕಾಗಿದ್ದ ಮೊದಲ ಕೆಲಸವೆಂದರೆ ತಮ್ಮ ರಾಜ್ಯಕ್ಕೆ ಉತ್ತಮ ಆಡಳಿತ ಒದಗಿಸಿ ಜನಪರ ಯೋಜನೆಗಳ ಫಲ ಶೀಘ್ರವಾಗಿ ಜನರಿಗೆ ದೊರಕುವಂತೆ ಮಾಡಬೇಕಾದದ್ದು. ಆದರೆ ಇವರು ತಮ್ಮ ಪಕ್ಷ ಇತರ ರಾಜ್ಯಗಳಲ್ಲಿ ಬೆಳೆಯುವಂತೆ ಮಾಡಿದರು. ಅಷ್ಟೇ ಅಲ್ಲದೆ ದೆಹಲಿಯ ಸಿಂಹಾಸನದ ಮೇಲೆ ಕಣ್ಣಾಡಿಸಿದರು. ಯಾವ ಮುಖ್ಯಮಂತ್ರಿಗೂ ಇಲ್ಲದ ವಿಶೇಷ ರಕ್ಷಣೆಯನ್ನು ತಮಗೆ ಒದಗಿಸುವಂತೆ ಕೇಂದ್ರ ಸರ್ಕಾರವನ್ನು ಕೇಳಿದರು. ಕೇಂದ್ರ ಸರ್ಕಾರ ಇದಕ್ಕೆ ಕಿವಿಕೊಡದಿದ್ದಾಗ ತಮ್ಮ ಭದ್ರತೆಯನ್ನು ತಾವೇ ಹೆಚ್ಚಿಸಿಕೊಂಡರು.

ತಾವು ಪ್ರತಿನಿಧಿಸುವ ದಲಿತವರ್ಗದವರು ಕೊಳಗೇರಿಗಳಲ್ಲಿ ಕೊಳೆಯುತ್ತಿರುವಾಗ ತಾವು ಮಾತ್ರ ತಮ್ಮ ದಲಿತತ್ವವನ್ನು ಕಳಚಿಕೊಂಡು ಸಾಮ್ರಾಜ್ಞಿಯಂತೆ ತಮ್ಮ ಹುಟ್ಟು ಹಬ್ಬವನ್ನು ಲಕ್ನೋ ಮತ್ತು ದೆಹಲಿ ನಗರಗಳಲ್ಲಿ ವೈಭವದಿಂದ ಆಚರಿಸಿಕೊಂಡರು. ಈ ರೀತಿ ಎರಡು ನಗರಗಳಲ್ಲಿ ಹುಟ್ಟು ಹಬ್ಬ ಆಚರಿಸಿಕೊಂಡ ರಾಜಕಾರಣಿಗಳಲ್ಲಿ ಇವರು ಮೊದಲನೆಯವರು. ಈ ಸಮಾರಂಭಗಳಲ್ಲಿ ಅವರ ಉಡಿಗೆ, ಅಲಂಕಾರ, ಕೇಕ್ ಎಲ್ಲವೂ ಕಣ್ಣು ಕೋರೈಸುವಂತೆ ಇತ್ತು. ಅಲ್ಲಿ ಇದ್ದವರೆಲ್ಲ ಶ್ರೀಮಂತರು, ಉದ್ಯೋಗಪತಿಗಳು ಮತ್ತು ಮೇಲ್ವರ್ಗದ ಅಧಿಕಾರಿಗಳು. ದಲಿತರು ಯಾರೂ ಇರಲಿಲ್ಲ. ಇಷ್ಟೇ ಅಲ್ಲದೆ ದೇಶದ ಎಲ್ಲ ಪ್ರಮುಖ ದಿನಪತ್ರಿಕೆಗಳಲ್ಲಿ ಪುಟಪೂರ್ತಿ ಬಹುವರ್ಣಗಳಲ್ಲಿ ತಮ್ಮ ಭಾವಚಿತ್ರ ಪ್ರಕಟಿಸಿಕೊಂಡು ತಮ್ಮ ಕನಸಿನ ಯೋಜನೆಗಳನ್ನು ಜಾಹೀರುಮಾಡಿದರು. ಈ ಪುಟಗಳಲ್ಲಿನ ತಲೆಬರಹಗಳನ್ನು ಓದಿದ ಕೂಡಲೆ ಇದೆಲ್ಲ ರದ್ದಿ ಕಾಗದವಾಗಿ ಕಸದ ಬುಟ್ಟಿ ಸೇರುತ್ತದೆ ಎಂಬುದನ್ನು ಮರೆತರು. ಇದಕ್ಕಾಗಿ ಲಕ್ಷಾಂತರ-ಕೋಟ್ಯಾಂತರ ರೂಪಾಯಿ ಖರ್ಚುಮಾಡಿದರು. ಏಕೆಂದರೆ ಇದೆಲ್ಲ ಸಾಮಾನ್ಯ ಜನರಿಂದ ಬಂದ ತೆರಿಗೆ ಹಣ, ತಮ್ಮದಲ್ಲದ್ದು.

ತಾವು ಏನಾದರೂ ಸಾಧಿಸಿದರೆ ಎಲ್ಲರೂ ತಮ್ಮನ್ನು ಹುಡುಕಿಕೊಂಡು ಬಂದು ತಮ್ಮ ಸಾಧನೆಯನ್ನು ಗುರುತಿಸುತ್ತಾರೆ, ಗೌರವಿಸುತ್ತಾರೆ ಎಂಬುದನ್ನು ಮರೆತರು. ಇದಕ್ಕೆ ಮುಖ್ಯ ಕಾರಣ ಅಧಿಕಾರದ ಅಮಲು. ಅಧಿಕಾರ, ಐಶ್ವರ್ಯ ಸೇರಿದರೆ ಯಾರೇ ಆದರೂ ಈ ರೀತಿ ದಾರಿ ತಪ್ಪುತ್ತಾರೆಂಬುದಕ್ಕೆ ಇದು ಒಂದು ನಿದರ್ಶನ.

– ವಿ. ವೆಂಕಟರಮಣಶೆಟ್ಟಿ, ಮೈಸೂರು

ಕನ್ನಡಿಗರು ಸಾಧಿಸಬೇಕಾದ ಗುರಿಗಳು

– ಪ್ರೊ. ಎಲ್.ಎಸ್. ಶೇಷಗಿರಿರಾವ್

(ಉಡುಪಿಯಲ್ಲಿ ನಡೆದ ೭೧ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣದ ಮುಂದುವರೆದ ಭಾಗ)

ಎರಡು ಪ್ರಶ್ನೆಗಳು ಆಗಾಗ ನನ್ನ ಮುಂದೆ ಬರುತ್ತವೆ – ಒಂದು, ನಮ್ಮ ನಾಡಿನಲ್ಲಿ ಮಹಿಳಾ ವ್ಯಂಗ್ಯ ಚಿತ್ರಕಾರರು ಏಕೆ ಕಾಣುವುದಿಲ್ಲ? ಮಹಿಳೆಯರಿಗೆ 'ವ್ಯಂಗ್ಯದ ಕಣ್ಣಿ'ಲ್ಲ ಎನ್ನಬಹುದೇ? ಎರಡನೆಯದು, ನಮ್ಮ ನಾಡಿನಲ್ಲಿ 'ಆಲಿಸ್ ಇನ್ ವಂಡರ್‌ಲೆಂಡ್'ನಂತೆ ವಿಚಿತ್ರ ಆದರೆ 'ಎಕ್ಸೈಟಿಂಗ್' ಆದ ಕಲ್ಪನಾ ಅನುಭವಗಳನ್ನು ಹೆಣೆದ ಮಕ್ಕಳ ಕಥೆ ಏಕೆ ಬಂದಿಲ್ಲ? ಅದೇ ಅನುಭವಗಳು ಎಂದು ನಾನು ಹೇಳುತ್ತಿಲ್ಲ. ಆದರೆ ಕಿರಿದ ಹಲ್ಲಿನ ನಗುವನ್ನು ಹಿಂದೆ ಬಿಟ್ಟು ಮಾಯವಾಗುವ ಬೆಕ್ಕು. 'ನಾನು ಬಳಸಿದ ಪದಕ್ಕೆ ನಾನು ಇಟ್ಟಿದ್ದೇ ಅರ್ಥ, ಯಜಮಾನರು ಯಾರು – ನಾನೋ ಪದವೋ?' ಎನ್ನುವ ಮಹಿಳೆ, ಇಂಥ ವಿಶಿಷ್ಟ ಘಟನೆಗಳನ್ನು ನಾವು ಕಲ್ಪಿಸಿಕೊಳ್ಳಲಾರವೆ? ಅನುವಾದ ಮಾಡಿ ಬೇರೆ ದೇಶಗಳಿಗೆ ಕಳಿಸಿದರೆ ಅಲ್ಲಿನ ಮಕ್ಕಳು ಖುಷಿಯಿಂದ ಓದಬಹುದಾದ ಮಕ್ಕಳ ಸಾಹಿತ್ಯ ನಾವೆಷ್ಟು ಕೊಡಬಲ್ಲೆವು?

ಶಿಕ್ಷಣ ಕ್ಷೇತ್ರದಲ್ಲಿ ಒಂದು ಮಾತಿದೆ. 'ಪ್ರತಿಯೊಂದು ಮಗುವು ಹುಟ್ಟಿದಾಗಲೂ ಮಾನವ ಕುಲ ಮರುಹುಟ್ಟನ್ನು ಪಡೆಯುತ್ತದೆ'. ಏಕೆಂದರೆ ಆಗ ಹುಟ್ಟಿದ ಮಗು ಒಳಿತಿಗಾಗಿ ಕೆಡಕಿಗಾಗಿ ಮಾನವಕುಲದ ಎಲ್ಲ ಸಾಧ್ಯತೆಗಳನ್ನು ಅಳವಡಿಸಿಕೊಂಡು ಹುಟ್ಟುತ್ತದೆ. ಅದು ಒಬ್ಬ ಕಬೀರ ಆಗಬಹುದು, ಒಬ್ಬ ಗಾಂಧಿ ಆಗಬಹುದು, ಒಬ್ಬ ಐನ್‌ಸ್ಟೈನ್ ಆಗಬಹುದು, ಒಬ್ಬ ಮೇಡಂ ಕ್ಯೂರಿ ಆಗಬಹುದು, ಒಬ್ಬ ಸಂತ ಮೀರಾ ಆಗಬಹುದು, ಒಬ್ಬ ಅಬ್ಬಕ್ಕ ಆಗಬಹುದು, ಒಬ್ಬ ಭಗತ್‌ಸಿಂಗ್ ಆಗಬಹುದು, ಒಬ್ಬ ಹಿಟ್ಲರ್ ಆಗಬಹುದು, ಒಬ್ಬ ವೀರಪ್ಪನ್ ಆಗಬಹುದು. ಅದು ಹೇಗೆ ಅರಳುತ್ತದೆ ಎನ್ನುವುದು ಸ್ವಲ್ಪಮಟ್ಟಿಗಾದರೂ ಸಮಾಜವು ಒದಗಿಸುವ ವಾತಾವರಣವನ್ನು ಅವಲಂಬಿಸಿರುತ್ತದೆ. ನಾವು ಮಕ್ಕಳಿಂದ ಬಾಲ್ಯವನ್ನು ಕಸಿದುಕೊಂಡಿದ್ದೇವೆ. ಅರಳುವ ಮನಸ್ಸಿನ ಮೇಲೆ ಸ್ಪರ್ಧೆಯ ಬಂಡೆಯನ್ನು ಹೇರಿದ್ದೇವೆ. ಆಟವಾಡಲು ದೊಡ್ಡ ನಗರಗಳಲ್ಲಿ ಮೈದಾನಗಳಿಲ್ಲ. ಕೆಲವು ವರ್ಷಗಳ ಹಿಂದೆ ಒಂದು ಇಂಗ್ಲಿಷ್ ದೈನಿಕವು ವಿವಿಧ ಪರೀಕ್ಷೆಗಳಲ್ಲಿ ಮೊದಲನೆಯ ಅಥವಾ ಎರಡನೆಯ ಸ್ಥಾನವನ್ನು ಪಡೆದ ೧೫ ಮಂದಿ ವಿದ್ಯಾರ್ಥಿ ವಿದ್ಯಾರ್ಥಿನಿಯರೊಂದಿಗೆ ಸಂದರ್ಶನವನ್ನು ಪ್ರಕಟಿಸಿತು. "ನೀವು ಯಾವ ಆಟ ಆಡುತ್ತೀರಿ?" ಎಂದು ಪ್ರಶ್ನಿಸಿದಾಗ ಹತ್ತು ಮಂದಿ ಹೇಳಿದ್ದು 'ವಿಡಿಯೋ ಗೇಮ್ಸ್'. ಬಯಲಿನಲ್ಲಿ ತಮ್ಮ ವಯಸ್ಸಿನವರೊಡನೆ ಬೆಳಕು ಗಾಳಿಗಳಲ್ಲಿ ಆಡುತ್ತ, ಜಗಳವಾಡಿ ಮತ್ತೆ ಸ್ನೇಹಿತರಾಗಿ ಖುಷಿಯಾಗಿ ಕಾಲ ಕಳೆದು ಸಹಬಾಳ್ವೆಯನ್ನು ರಕ್ತಗತ ಮಾಡಿಕೊಳ್ಳಬೇಕಾದ ವಯಸ್ಸಿನಲ್ಲಿ ಮನೆಯಲ್ಲಿ ಕುಳಿತು ಜೀವರಹಿತ ಬೊಂಬೆಗಳೊಡನೆ ಆಟ. ಹಗಲು ರಾತ್ರಿ ಸ್ಪರ್ಧೆಯ ಮನೋಧರ್ಮವನ್ನು ಮಕ್ಕಳಲ್ಲಿ ಬೆಳಸಿ, ಸಹಕಾರ – ಸಾಮರಸ್ಯಗಳ ಸಮಾಜವನ್ನು ಕಟ್ಟುವ ಕನಸನ್ನು ಕಾಣುತ್ತೇವೆ. ಮಕ್ಕಳ ಮನಸ್ಸು ಆರೋಗ್ಯಕರವಾಗಿ ರೂಪಿಸುವ ಸಾಹಿತ್ಯವನ್ನು ಕೊಡಬಲ್ಲ ಸಂಸ್ಥೆಯೊಂದರ ಅಗತ್ಯವಿದೆ.

ಇದನ್ನು ಯಾವ ಹೆಸರಿನಿಂದಲಾದರೂ ಕರೆಯಿರಿ. ಅದರಲ್ಲಿ ಒಬ್ಬ ಮಕ್ಕಳ ಮನಃಶಾಸ್ತ್ರದ ತಜ್ಞರು, ಒಬ್ಬರು ಚಿಕ್ಕ ವಯಸ್ಸಿನ ಮಕ್ಕಳಿಗೆ ಪಾಠ ಹೇಳಿದ ನುರಿತ ಶಿಕ್ಷಕರು, ಒಬ್ಬರು ಚಿತ್ರಕಾರರು ಇರಲೇಬೇಕು. ಈ ಸಂಸ್ಥೆಯು ಮಕ್ಕಳೆಂದು ನಾವು ನಿರ್ದೇಶಿಸುವ ವಯೋಮಾನದವರಲ್ಲಿ ಬೇರೆ ಬೇರೆ ಘಟ್ಟಗಳವರು ಇರುತ್ತಾರೆ, ಇವರಿಗೆ ಬೇರೆ ಬೇರೆ ಲಕ್ಷಣಗಳ ಕೃತಿಗಳು ಅಗತ್ಯ ಎನ್ನುವುದನ್ನು ಗುರುತಿಸಬೇಕು. ಪ್ರತಿಯೊಂದು ಕೃತಿಯನ್ನು ಪ್ರಕಟಿಸುವ ಮೊದಲು ಬೇರೆ ಬೇರೆ ಶಾಲೆಗಳ ಕೆಲವು ಮಕ್ಕಳನ್ನು ಸೇರಿಸಿ ಅವರಿಗೆ ಓದಲು ಕೊಟ್ಟು ಅವರ ಪ್ರತಿಕ್ರಿಯೆಯನ್ನು ಪರಿಗಣಿಸಿ ಕೃತಿಯನ್ನು ಪ್ರಕಟಿಸಬೇಕು ಮತ್ತು ಸಮಾಜದ ಬಹುಮಂದಿಗೆ ಎಟುಕುವ ಬೆಲೆಯಲ್ಲಿ ಮಾರಲು ಸರ್ಕಾರವು ನೆರವಾಗಬೇಕು. ಸರ್ಕಾರವು ಸುಲಭ ಬೆಲೆ ಇಟ್ಟು ಮಕ್ಕಳ ಕೈಯಲ್ಲಿ ಉಪದೇಶದ ಅತಿಭಾರವಿಲ್ಲದ, ಖುಷಿಕೊಡುವ ಪುಸ್ತಕಗಳನ್ನು ಇಡಲಿ ಎಂದು ಪ್ರಾರ್ಥಿಸುತ್ತೇನೆ.

ನನ್ನ ಮನಸ್ಸಿಗೆ ಬಹಳ ನೋವನ್ನು ಕೊಟ್ಟಿರುವ ಸಂಗತಿಯುನ್ನು ಪ್ರಸ್ತಾಪಿಸಬಯಸುತ್ತೇನೆ. ನಮ್ಮ ಇತಿಹಾಸದಲ್ಲಿ ಒಂದು ಉಜ್ವಲ ಅಧ್ಯಾಯವನ್ನು ಬರೆದ ವಿಜಯನಗರ ಸಾಮ್ರಾಜ್ಯದ ರಾಜಧಾನಿ ಹಂಪಿ ಮತ್ತು ನಾಡಿನ ಪುಣ್ಯಕ್ಷೇತ್ರವಾದ ಗೋಕರ್ಣಗಳ ದುಸ್ಥಿತಿ. ಈ ವಿಷಯಕ್ಕೆ ಜಾತಿ ಮತ ಧರ್ಮಗಳ ಗಂಟು ಹಾಕುವುದು ಬೇಡ. ಹಂಪೆಯ ಸ್ಥಿತಿಯನ್ನು ನಾನೇ ಕಣ್ಣಾರೆ ಕಂಡಿದ್ದೇನೆ. ಗೋಕರ್ಣದ ವಿಷಯ ಅಲ್ಲಿಯವರೇ ಹೇಳುವುದನ್ನು ಕೇಳಿದ್ದೇನೆ. ಹಂಪೆಯ ಅವಶೇಷಗಳನ್ನು ಸ್ವಚ್ಛವಾಗಿಟ್ಟು ಯಾವ ಅಪಚಾರವಾಗದಂತೆ ಉಳಿಸಿಕೊಳ್ಳುವುದು ನಮ್ಮ ಕರ್ತವ್ಯ. ಈ ಕರ್ತವ್ಯದಲ್ಲಿ ತೀರ ಲೋಪವಾಗುತ್ತಿದೆ. ಅವುಗಳ ಪಾವಿತ್ರ್ಯಕ್ಕೆ ಕುಂದು ತರುವ ಕಾರ್ಯಗಳು ನಡೆಯುತ್ತಿವೆ. ಹಂಪಿ, ಗೋಕರ್ಣ ಎರಡು ಸ್ಥಳಗಳಲ್ಲಿಯೂ ಪ್ರವಾಸಿಗರು ಅಥವಾ ಪ್ರವಾಸಿಗರ ವೇಷದಲ್ಲಿ ಬೇರೆ ಉದ್ದೇಶಗಳಿಂದ ಬರುವವರು ಹೇಗೆ ಬೇಕಾದರೂ ನಡೆದುಕೊಳ್ಳಬಹುದು ಎನ್ನುವಂತಾಗಿದೆ. ಪ್ರವಾಸಿಗರಿಂದ ಬರುವ ಹಣಕ್ಕೆ ಕರ್ನಾಟಕವು ತನ್ನ ಮಾನವನ್ನು ಮಾರಿಕೊಳ್ಳುವುದೇ? ಹಂಪೆ ಅಭಿವೃದ್ಧಿ ಪ್ರಾಧಿಕಾರಕ್ಕೆ ಖಾಯಂ ಆಯುಕ್ತರಿಲ್ಲ ಎಂದು ವರದಿಯಾಗಿದೆ. ಹಂಪೆಯ ಸ್ಥಿತಿ ಕನ್ನಡಿಗರಿಗೊಂದು ಅಪಮಾನ. ಗೋಕರ್ಣದಲ್ಲಿಯೂ ಪ್ರವಾಸಿಗರ ಸ್ವಚ್ಛಂದ ರೀತಿಗಳು ನಾಗರೀಕ ಸಮಾಜಕ್ಕೆ ಕಳಂಕ. ರಾಜ್ಯ ಸರ್ಕಾರವು ಇತ್ತ ಗಮನ ಹರಿಸಬೇಕು.

ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಮನ್ನಣೆಯನ್ನು ನೀಡುವ ವಿಷಯ. ಹಲವರು ವಿದ್ವಾಂಸರು ಈ ಮನ್ನಣೆ ಲಭ್ಯವಾಗದಿದ್ದರೆ ನಷ್ಟವಿಲ್ಲ ಎಂದು ಹೇಳುವುದು ನನಗೆ ಆಶ್ಚರ್ಯವನ್ನುಂಟುಮಾಡುತ್ತದೆ. ಇಂದು ಭಾರತ ಸರ್ಕಾರವು ಜಗತ್ತಿಗೆ ಹೇಳುತ್ತಿದೆ, "ಭಾರತದಲ್ಲಿ ಒಂದೂವರೆ ಸಾವಿರ ವರ್ಷಗಳಷ್ಟು ಇತಿಹಾಸವಿರುವ ಭಾಷೆಗಳು ಎರಡೇ ಎರಡು. ತಮಿಳು ಮತ್ತು ಸಂಸ್ಕೃತ." ಇದು ಕನ್ನಡಕ್ಕೆ ಅಪಚಾರವಲ್ಲವೆ? ಇದನ್ನೇಕೆ ಸಹಿಸಿಕೊಳ್ಳಬೇಕು? ಅಲ್ಲದೆ, ತಮಿಳು ಭಾಷೆಯ ಬೆಳವಣಿಗೆಗೆಂದೇ ಆಗಲೇ ಮೈಸೂರಿನಲ್ಲಿ ಕಟ್ಟಡ ಸಿದ್ಧವಾಗಿದೆ. ಇದರ ಬೆಳವಣಿಗೆಗಾಗಿ ಯೋಜನೆ ಸಿದ್ಧವಾಗಿದೆ. ಹಲವು ಕೇಂದ್ರ ವಿಶ್ವವಿದ್ಯಾನಿಲಯಗಳಲ್ಲಿ ತಮಿಳು ಪೀಠಗಳು ಸ್ಥಾಪನೆಯಾಗಲಿವೆ. ಕನ್ನಡಿಗರು ಕೇಂದ್ರ ಸರ್ಕಾರಕ್ಕೆ ತೆರಿಗೆಗಳನ್ನು ಕೊಡುವುದಿಲ್ಲವೆ? ಈ ವಿಷಯವನ್ನು ಕುರಿತು ಸ್ನೇಹಿತರೊಬ್ಬರು ಪ್ರತ್ಯೇಕವಾಗಿ ಮಾತನಾಡಲಿರುವುದರಿಂದ ನಾನು ಇದನ್ನು ಬೆಳಸುವುದಿಲ್ಲ. ಒಂದು ಮಾತನ್ನು ನಿವೇದಿಸಬಯಸುತ್ತೇನೆ. ತಮಿಳುನಾಡಿನ ಭಾಷಾ ವಿದ್ವಾಂಸರಾದ ಡಾ. ಇರಾವತಿ

ಮಹದೇವನ್ ಅವರ 'Early Tamil Epigraphy' ಎನ್ನುವ ಪುಸ್ತಕದಿಂದ ಈ ಮಾತುಗಳನ್ನು ಉದ್ಧರಿಸ ಬಯಸುತ್ತೇನೆ.

"ಲಭ್ಯವಾಗಿರುವ ಅತ್ಯಂತ ಹಳೆಯ ಕನ್ನಡ ಶಾಸನಗಳು ಮತ್ತು ಸಾಹಿತ್ಯಕ್ಕೆ ಮೊದಲಿನಿಂದಲೇ ಸುಮಾರು ಕ್ರಿ.ಪೂ. ಎರಡನೆಯ ಶತಮಾನದಿಂದ ಕ್ರಿ.ಶ. ನಾಲ್ಕನೆಯ ಶತಮಾನದ ಅವಧಿಯಲ್ಲಿ ತಮಿಳು-ಬ್ರಾಹ್ಮಿ ಲಿಪಿಗಳ ಮೇಲೆ ಈವರೆಗೆ ಊಹಿಸದಿದ್ದ ಹಳಗನ್ನಡದ ಪ್ರಭಾವವನ್ನು ಈ ಅಧ್ಯಯನವು ಬೆಳಕಿಗೆ ತಂದಿದೆ" ಎಂದರೆ, ತಮಿಳುನಾಡಿನ ಈ ಸಂಶೋಧಕರು ಹೇಳುವಂತೆ ಕನ್ನಡ ಲಿಪಿಯು ಕ್ರಿ.ಪೂ. ಎರಡನೆಯ ಶತಮಾನದ ಹೊತ್ತಿಗೆ ಸಾಕಷ್ಟು ಕಾಲ ಅಸ್ತಿತ್ವದಲ್ಲಿದ್ದಿರಬೇಕು.

ಒಂದೂವರೆ ವರ್ಷಕ್ಕಿಂತ ಹಿಂದೆ ಪ್ರಧಾನಿ ಡಾ.ಮನಮೋಹನಸಿಂಗ್ ಅವರು ಬೆಂಗಳೂರಿಗೆ ಬಂದಾಗ ರಾಜಭವನದಲ್ಲಿ ನಡೆದ ಸಭೆಯಲ್ಲಿ ಡಾ. ಪಾಟೀಲ ಪುಟ್ಟಪ್ಪನವರು, ಡಾ. ದೇಜಗೌ, ಡಾ. ಎಂ. ಚಿದಾನಂದಮೂರ್ತಿ ಮತ್ತು ನಾನು ಭಾಷಣ ಮಾಡಿ ಕನ್ನಡಕ್ಕಾದ ಅನ್ಯಾಯವನ್ನು ವಿವರಿಸಿದೆವು. ಆದರೆ ಕೇಂದ್ರ ಸರ್ಕಾರವು ನೇಮಿಸಿದ ತಜ್ಞರ ಸಮಿತಿಯ ಸಭೆಯನ್ನು ಸಹ ಕರೆದಿಲ್ಲ. ಶಾಸ್ತ್ರೀಯ ಭಾಷೆಯ ಪ್ರಕರಣ ಕೇಂದ್ರ ಸರ್ಕಾರವು ಕನ್ನಡಿಗರ ವಿಷಯದಲ್ಲಿ ಉದ್ದೇಶಪೂರ್ವಕವಾಗಿ ಮಾಡಿದ ಅವಮಾನ.

ಬಂಧುಗಳೆ, ಈಗ ನಾನು ನನ್ನ ಭಾಷಣದ ಎರಡನೆಯ ಭಾಗಕ್ಕೆ ಬರುತ್ತಿದ್ದೇನೆ. ಇದನ್ನು ಸಂಗ್ರಹವಾಗಿ ಹೀಗೆ ಹೇಳಬಹುದು; "ಕರ್ನಾಟಕದ ನಾಯಕರೆ, ಕನ್ನಡಿಗರು ಭಾರತದಲ್ಲಿ ಎರಡನೆಯ ದರ್ಜೆಯ ಪ್ರಜೆಗಳಾಗುವಂತೆ ಮಾಡಬೇಡಿ. ಕನ್ನಡಿಗರೆ, ಭಾರತದಲ್ಲಿ ಎರಡನೆಯ ದರ್ಜೆಯ ನಾಗರಿಕರಾಗಲು ಒಪ್ಪಬೇಡಿ. ಕನ್ನಡಿಗರಿರುವುದು ಕೇಂದ್ರ ಸರ್ಕಾರಕ್ಕೆ ತೆರಿಗೆಕೊಟ್ಟು, ಸೈನ್ಯದಲ್ಲಿ ಬಲಿದಾನಕ್ಕೆ ಸಿದ್ಧವಾಗಿ ಸೇವೆ ಸಲ್ಲಿಸಿ ಕೇಂದ್ರವು ಅನುಗ್ರಹ ಮಾಡಿದುದನ್ನು ದೈನ್ಯತೆಯಿಂದ ಸ್ವೀಕರಿಸುವುದಕ್ಕಲ್ಲ".

ಆತ್ಮೀಯ ಕನ್ನಡಿಗರೇ, ಇವು ಉದ್ವೇಗದ ಮಾತುಗಳು ಎಂದು ದಯಮಾಡಿ ಭಾವಿಸಬೇಡಿ. ಕೆಲವು ವಾಸ್ತವಾಂಶಗಳತ್ತ ಕಣ್ಣು ಹೊರಳಿಸಿ. ಕೇಂದ್ರ ಸರ್ಕಾರದಲ್ಲಿ ಸಂಪುಟ ಕ್ಯಾಬಿನೆಟ್ ದರ್ಜೆಯ ಸಚಿವರು ೨೭ ಮಂದಿ ಇದ್ದಾರೆ. ೨೭ ಮಂದಿಯಲ್ಲಿ ಒಬ್ಬರೂ ಕನ್ನಡಿಗರಿಲ್ಲ. ಕರ್ನಾಟಕಕ್ಕೆ ಸಂಬಂಧಪಟ್ಟ ವಿಷಯವನ್ನು ಚರ್ಚಿಸುವಾಗ ಕರ್ನಾಟಕದ ಪರ ದನಿ ಎತ್ತಲು ಒಬ್ಬ ಕನ್ನಡಿಗನೂ ಇಲ್ಲ, ಕರ್ನಾಟಕಕ್ಕೆ ಸಂಬಂಧಪಟ್ಟ ಇಂಥ ವಿಷಯವನ್ನು ಕೇಂದ್ರ ಸರ್ಕಾರ ಪರಿಶೀಲಿಸಬೇಕು ಎಂದು ಹೇಳಲು ಒಬ್ಬರೂ ಇಲ್ಲ. ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಮನ್ನಣೆ ನೀಡುವ ವಿಷಯದ ಕಥೆಯನ್ನು ಸ್ಮರಿಸಿಕೊಳ್ಳಿ.

ಬಂಧುಗಳೆ! ಕರ್ನಾಟಕ ರಾಜ್ಯದ ರಾಜಧಾನಿ ಬೆಂಗಳೂರು ನಗರಪಾಲಿಕೆಯು ನೌಕರರನ್ನು ನೇಮಿಸಿಕೊಳ್ಳುವಾಗ ಪತ್ರಿಕೆಗಳಲ್ಲಿ ನೀಡುವ ಜಾಹೀರಾತಿನಲ್ಲಿ ಯಾವ ಭಾಷೆಯ ಜ್ಞಾನ ಕಡ್ಡಾಯ ಎಂದು ವಿಧಿಸುತ್ತದೆ ಎಂದು ನಿರೀಕ್ಷಿಸುತ್ತೀರಿ? ಒಂದು ಜಾಹೀರಾತನ್ನು ತಮ್ಮ ಮುಂದಿಡುತ್ತೇನೆ. 'ನಗರಪಾಲಿಕೆಯ ಆರ್ಟಿಸ್ಟ್ ಪೆಯ್‌ನ್ಟರ್ ಹುದ್ದೆಗೆ ತಮಿಳು, ತೆಲುಗು ಭಾಷಾಜ್ಞಾನ ಕಡ್ಡಾಯ', ಇದು ಸುಮಾರು ೪೫ ವರ್ಷಗಳ ಹಿಂದೆ ಬೆಂಗಳೂರು ಮಹಾನಗರ ಪಾಲಿಕೆಯ ಒಂದು ಜಾಹೀರಾತು.

ಆತ್ಮೀಯರೆ, ಕರ್ನಾಟಕದ ರಾಜಧಾನಿಯಾದ ಬೆಂಗಳೂರನ್ನು ಕನ್ನಡವಾಗಿ ಉಳಿಸಿಕೊಳ್ಳುವ ಅಗತ್ಯವು ಕರ್ನಾಟಕ ಸರ್ಕಾರದ ಗಮನಕ್ಕಾಗಲಿ ಬೆಂಗಳೂರು

ಮಹಾನಗರ ಪಾಲಿಕೆಯ ಗಮನಕ್ಕಾಗಲಿ ಬೆಂಗಳೂರಿನಾಚೆ ಇರುವ ಕನ್ನಡಿಗರ ಗಮನಕ್ಕಾಗಲಿ ಸಾಕಷ್ಟು ಸ್ಪಷ್ಟವಾಗಿ ಬಂದಂತೆ ತೋರುವುದಿಲ್ಲ. ರಾಜ್ಯದ ರಾಜಧಾನಿಯಲ್ಲಿಯೆ ಕನ್ನಡಿಗರಿಗೆ ಸ್ಥಾನವಿಲ್ಲದಿದ್ದರೆ, ಕನ್ನಡಕ್ಕೆ ಸ್ಥಾನವಿಲ್ಲದಿದ್ದರೆ ಕರ್ನಾಟಕದ ಪ್ರತಿಷ್ಠೆ ಎಲ್ಲಿ ಉಳಿಯಿತು? ಅದರ ಹಿತರಕ್ಷಣೆ ಹೇಗೆ ಸಾಧ್ಯ? ಕರ್ನಾಟಕ ಏಕೀಕರಣವಾದರೂ ೧೯೫೬ರ ನವೆಂಬರ್ ಒಂದರ ಅನಂತರ ನಾಲ್ಕು ವರ್ಷ ಸರ್ಕಾರವು ರಾಜ್ಯೋತ್ಸವಕ್ಕೆ ರಜಾ ಘೋಷಿಸಲಿಲ್ಲ. ರಾಜ್ಯೋತ್ಸವವನ್ನು ಆಚರಿಸಲಿಲ್ಲ. ರಾಜ್ಯೋತ್ಸವಕ್ಕೆ ರಜಾ ಘೋಷಿಸದ ಸರ್ಕಾರವು ಇಂಗ್ಲೆಂಡ್ ಮತ್ತು ಅಧ್ಯಕ್ಷರ ತಂಡಗಳ ನಡುವೆ ನಡೆದ ಕ್ರಿಕೆಟ್ ಪಂದ್ಯಕ್ಕೆ ರಜ ಘೋಷಿಸಿತು.

ಇಂದು ಬೆಂಗಳೂರು ನಗರದಲ್ಲಿ ಒಂದು ನೂರು ಜನರಲ್ಲಿ ೩೬ ಜನ ಮಾತ್ರ ಕನ್ನಡಿಗರು, ಎಂದರೆ ಬೆಂಗಳೂರಿನಲ್ಲಿ ಕನ್ನಡಿಗರಲ್ಲದವರು ಸುಮಾರು ೪೭ ಲಕ್ಷ ಮಂದಿ ಇದ್ದಾರೆ. ದಿನಕ್ಕೆ ೩೦೦ ಸಂಸಾರಗಳು ಇಲ್ಲಿಗೆ ಬರುತ್ತವೆ ಎಂದರೆ ದಿನಕ್ಕೆ ಸುಮಾರು ಒಂದುವರೆ ಸಾವಿರ ಮಂದಿ ಬರುತ್ತಾರೆ. ಇವರಲ್ಲಿ ಒಂದು ಸಾವಿರದ ಇನ್ನೂರರಷ್ಟು ಮಂದಿಯಾದರೂ ಕರ್ನಾಟಕದ ಹೊರಗಡೆಯಿಂದ ಬಂದವರು. ವೋಟ್ ಬ್ಯಾಂಕ್ ಲೆಕ್ಕಾಚಾರದಿಂದ ನಮ್ಮ ನಾಯಕರೇ ಕರ್ನಾಟಕದ ಹೊರಗಿನಿಂದ ತಂದಿರಿಸಿದ ಸಂಸಾರಗಳ ಕೊಳೆಗೇರಿಗಳು ಬೆಂಗಳೂರಿನಲ್ಲಿವೆ. ೨೦೦೭ರ ನವೆಂಬರ್೧೨ರಂದು ಹಲವು ಪತ್ರಿಕೆಗಳಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಒಂದು ಪ್ರಕಟಣೆ ಬಂದಿದೆ. 'ಯಾವುದೇ ಜಾಹೀರಾತಿನಲ್ಲಿ ಕನ್ನಡ ಪದ ಬಳಕೆಗೆ ಆದ್ಯತೆ ಕೊಡಬೇಕು. ವ್ಯಾಕರಣ ದೋಷ ಇಲ್ಲದಂತೆ ಕಾಳಜಿ ವಹಿಸಬೇಕು. ಈ ಆದೇಶ ಮೀರಿದ ಫಲಕಗಳನ್ನು ಅಕ್ರಮವೆಂದು ಪರಿಗಣಿಸುವುದು,' ಎಂದು ಮಹಾನಗರ ಪಾಲಿಕೆ ತಿಳಿಸಿದೆ. ಬಂಧುಗಳೇ, ಇದು ೨೦೦೭ರ ನವೆಂಬರ್ ೧೭ ರಂದು. ೧೯೮೪ರ ಅಕ್ಟೋಬರ್ ೧೦ರಂದು ಕರ್ನಾಟಕ ಸರ್ಕಾರ, "ಕರ್ನಾಟಕದಲ್ಲಿರುವ ಎಲ್ಲ ವಾಣಿಜ್ಯ ಮತ್ತು ವ್ಯವಹಾರ ಸಂಘಗಳ ನಾಮಫಲಕಗಳು ಕನ್ನಡದಲ್ಲಿಯೇ ಇರತಕ್ಕದ್ದು" ಎಂದು ವಿಧಿಸಿತು. ರಾಜ್ಯ ಸರ್ಕಾರದ ಈ ಆಜ್ಞೆಯು ಹೊರಬಿದ್ದ ೨೩ ವರ್ಷಗಳ ನಂತರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ನೀಡಿರುವ ಪ್ರಕಟಣೆಯು ಕನ್ನಡದ ಬಳಕೆಯಲ್ಲಿ ಸರ್ಕಾರಕ್ಕೆ ಮತ್ತು ನಗರ ಪಾಲಿಕೆಗೆ ಇರುವ ಆಸಕ್ತಿಗೆ ಹಿಡಿದ ಕನ್ನಡಿ.

ಬಂಧುಗಳೇ, ಬೆಂಗಳೂರಿನಲ್ಲಿ ನಿಮಗೆ ಕನ್ನಡ ಕಿವಿಗೆ ಬೀಳುವುದು ಅಪರೂಪ. ಕಚೇರಿ, ಬ್ಯಾಂಕ್‌ಗಳಿಗೆ ಹೋದರೆ ಕನ್ನಡ ಹೆಚ್ಚಾಗಿ ಕೇಳಿಸುವುದಿಲ್ಲ. ಬೆಂಗಳೂರು ಮಾಹಿತಿ ತಂತ್ರಜ್ಞಾನ ಉದ್ಯಮದ ರಾಜಧಾನಿಯಾದನಂತರವಂತೂ ಕೆಲಸಗಳು. ನಿವೇಶನಗಳು, ಮನೆಗಳು ಕನ್ನಡಿಗರಲ್ಲದವರ ಪಾಲಿಗೆ ಹೋಗಿದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಒಂದು ಮನವಿ ಮಾಡಲು ಬಯಸುತ್ತೇನೆ. ಪ್ರಾಧಿಕಾರವನ್ನು ಪ್ರಾರಂಭಿಸಿದಾಗ ಮುಖ್ಯವಾಗಿ ಎರಡು ಉದ್ದೇಶಗಳಿದ್ದವು. ಮೊದಲನೆಯದು, ಕನ್ನಡವನ್ನು ಸಂಪೂರ್ಣವಾಗಿ ಆಡಳಿತ ಭಾಷೆಯನ್ನಾಗಿ ಮಾಡುವುದು ಮತ್ತು ಈ ಭಾಷೆಗೆ ಕರ್ನಾಟಕದಲ್ಲಿ ನ್ಯಾಯವಾದ ಸ್ಥಾನವನ್ನು ದೊರಕಿಸಿಕೊಡುವುದು; ಎರಡನೆಯದು ಕನ್ನಡಿಗರಿಗೆ ಉದ್ಯೋಗಾವಕಾಶಗಳಲ್ಲಿ ನ್ಯಾಯವಾದ ಸ್ಥಾನವನ್ನು ದೊರಕಿಸಿಕೊಡುವುದು. ಆಡಳಿತದಲ್ಲಿ ಕನ್ನಡ ಭಾಷೆಯ ಬಳಕೆಗೆ ಒಂದಿಷ್ಟು ಗಮನ ದೊರೆತಿದೆ. ಇದಕ್ಕಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರನ್ನು ಅಭಿನಂದಿಸುತ್ತೇನೆ. ಒಂದು ಪ್ರಶ್ನೆ ನಮ್ಮ ಮುಂದಿದೆ. ಯಾವ ಕಡತದಲ್ಲಿ

ಟಿಪ್ಪಣಿ ಕನ್ನಡದಲ್ಲಿ ಇಲ್ಲವೋ ಆ ಕಡತವನ್ನು ನೋಡುವುದಿಲ್ಲ ಎಂದು ಹೇಳಲು ಕರ್ನಾಟಕದ ಮುಖ್ಯಮಂತ್ರಿಗಳಿಗೆ ಏಕೆ ಆಗುವುದಿಲ್ಲ? ಸಾರ್ವಜನಿಕ ವಲಯದ ಉದ್ಯಮಗಳಲ್ಲಿ ಮತ್ತು ಖಾಸಗಿ ಉದ್ದಿಮೆಗಳಲ್ಲಿ ಕನ್ನಡಿಗರಿಗೆ ನ್ಯಾಯ ದೊರಕುತ್ತಿಲ್ಲ. ದೊರಕಿಸಿಕೊಡಲು ಪ್ರಾಧಿಕಾರವು ಇನ್ನಷ್ಟು ಪ್ರಯತ್ನ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಬೆಂಗಳೂರಿನ ಒಂದು ಕಾರ್ಖಾನೆಯ ಆಡಳಿತ ಮಂಡಳಿಯ ತರಬೇತಿಗಾಗಿ ೨೫೦ ಮಂದಿಯನ್ನು ಆಯ್ಕೆ ಮಾಡಿದ್ದಾರೆ. ಇವರಲ್ಲಿ ೨೦೦ ಮಂದಿ ಕರ್ನಾಟಕದವರಲ್ಲ. ಕರ್ನಾಟಕದವರಾದ ೫೦ ಮಂದಿಯಲ್ಲಿ ಕನ್ನಡಿಗರು ಮೂರು ಮಂದಿ. ಈ ಅನ್ಯಾಯವನ್ನು ಯಾರ ಬಳಿ ಹೇಳಿಕೊಳ್ಳುವುದು? ಪ್ರಾಧಿಕಾರದ ಅಧ್ಯಕ್ಷರಿಗೆ ರಾಜ್ಯದ ಸಂಪುಟ ಸಚಿವರ ಸ್ಥಾನವಿದೆ, ಎಂದರೆ ಸಾಕಷ್ಟು ಅಧಿಕಾರವೂ ಇದೆ. ಇದು ಕನ್ನಡಿಗರ ಅನ್ನದ ಪ್ರಶ್ನೆ. ಸರೋಜಿನಿ ಮಹಿಷಿ ವರದಿಯು ಸೂಚಿಸಿದಷ್ಟು ಉದ್ಯೋಗಾವಕಾಶವಾದರೂ ಕನಿಷ್ಠ ಪಕ್ಷ ಕನ್ನಡಿಗರಿಗೆ ದೊರೆಯಬೇಕು. ಕನ್ನಡಿಗರು ನಿರ್ವಹಿಸುತ್ತಿದ್ದ ಹಲವು ವೃತ್ತಿಗಳು, ವಸ್ತುಗಳ ವ್ಯಾಪಾರದ ಅವಕಾಶ ಈಗ ಕನ್ನಡಿಗರ ಕೈಯಿಂದ ಜಾರಿಹೋಗುತ್ತಿವೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಇತ್ತ ಗಮನ ಹರಿಸಿ ಕನ್ನಡಿಗರಿಗೆ ಅಗತ್ಯವಾದ ಹಣದ ಬೆಂಬಲಕ್ಕೆ ವ್ಯವಸ್ಥೆ ಮಾಡಬೇಕು. ಕರ್ನಾಟಕದ ಹೊರಗಿನಿಂದ ಬಂದ ಹಣದ ಥೈಲಿಗಳು ಒಂದು ದೊಡ್ಡ ಪ್ರಮಾಣದಲ್ಲಿ ವ್ಯವಹಾರ ಪ್ರಾರಂಭಿಸಿದಾಗ ಸ್ಥಳೀಯರ ಸ್ಥಿತಿ ಏನು? ಮಾಹಿತಿ ತಂತ್ರಜ್ಞಾನ ಉದ್ಯಮಕ್ಕೆ ಬೆಂಗಳೂರು ತವರಾದರೂ ಕನ್ನಡಿಗರಿಗೆ ಅಲ್ಲಿ ಉದ್ಯೋಗಗಳು ದೊರೆಯುತ್ತಿಲ್ಲ. ಕನ್ನಡಿಗರಿಗೆ ಮೀಸಲಾತಿಯ ಸೌಲಭ್ಯ ಮಾಡಿಕೊಡುವ ಅಗತ್ಯವಿದೆ. ಕನ್ನಡದಲ್ಲಿ, ಕನ್ನಡಿಗರಲ್ಲಿ ಸಾಕಷ್ಟು ಕಳಕಳಿ ಇರುವ ಅಧ್ಯಕ್ಷರು ಮನವೊಲಿಕೆ, ಅಧಿಕಾರ ಎರಡನ್ನೂ ಬಳಸಿ ಕನ್ನಡಿಗರಿಗೆ ಉದ್ಯೋಗದ ವಿಷಯದಲ್ಲಿ ನ್ಯಾಯವನ್ನು ದೊರಕಿಸಿಕೊಡಬೇಕು, ಕನ್ನಡಿಗರೆಲ್ಲ ಅವರ ಬೆಂಬಲಕ್ಕಿದ್ದಾರೆ.

ಕರ್ನಾಟಕ ಸರ್ಕಾರಕ್ಕೆ ನನ್ನದೊಂದು ವಿನಂತಿ. ಕರ್ನಾಟಕದ ರಾಜಧಾನಿಯಲ್ಲಿ ಕನ್ನಡಪರ ವಾತಾವರಣವನ್ನು ಬೆಳೆಸಲು ಕೈಕೊಳ್ಳಬೇಕಾದ ಕ್ರಮಗಳನ್ನು ಪರಿಶೀಲಿಸಿ ಸರ್ಕಾರಕ್ಕೆ ಸಲಹೆ ನೀಡಲು ಮಿತವಾದ ಸಂಖ್ಯೆಯ ಸದಸ್ಯರ ಸಮಿತಿಯನ್ನು ನೇಮಿಸಬೇಕು. ಇದರಲ್ಲಿ ಕಡೆಯ ಪಕ್ಷ ಒಬ್ಬ ವಾಸ್ತುಶಿಲ್ಪಿ, ಒಬ್ಬ ಇಂಜಿನಿಯರ್, ಒಬ್ಬ ಚಿತ್ರಕಲಾವಿದ, ಒಬ್ಬ ಸಾಹಿತಿ, ಒಬ್ಬ ಪತ್ರಕರ್ತರು ಸದಸ್ಯರಾಗಿರಬೇಕು. ಮಹಾನಗರ ಪಾಲಿಕೆಯೊಡನೆ ಸಮಾಲೋಚನೆ ಮಾಡಿ ಸಮಿತಿಯನ್ನು ನೇಮಕ ಮಾಡಬೇಕು. ಇದು ನಿರ್ದಿಷ್ಟ ಕಾಲದಲ್ಲಿ ಸರ್ಕಾರಕ್ಕೆ ವರದಿಯನ್ನು ಕೊಡಬೇಕು. ಸರ್ಕಾರವು ವಿಳಂಬವಿಲ್ಲದೆ ವರದಿಯನ್ನು ಕಾರ್ಯಗತ ಮಾಡಬೇಕು.

ಕನ್ನಡಿಗರಿಗೆ, ಕರ್ನಾಟಕದ ಸರ್ಕಾರಕ್ಕೆ ನನ್ನ ಪ್ರಾರ್ಥನೆ. ರಾಜ್ಯದ ಜನಸಂಖ್ಯೆಯಲ್ಲಿ ಒಂಭತ್ತರಲ್ಲಿ ಒಂದು ಭಾಗ ವಾಸಿಸುವುದು ಬೆಂಗಳೂರಿನಲ್ಲಿ. ಬೆಂಗಳೂರನ್ನು ಕನ್ನಡವಾಗಿ ಉಳಿಸಿ!

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಜೊತೆಗೇ ನೆನಪಿಗೆ ಬರುವುದು ಕನ್ನಡ ಪುಸ್ತಕ ಪ್ರಾಧಿಕಾರ. ಸ್ವತಃ ಸಾಹಿತಿಗಳೂ ಪುಸ್ತಕಪ್ರಿಯರೂ ಆದ ಶ್ರೀ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಗಳಾಗಿದ್ದಾಗ ಪುಸ್ತಕ ಪ್ರಾಧಿಕಾರದ ಸ್ಥಾಪನೆಯಾಯಿತು. ಪುಸ್ತಕ ಪ್ರಕಾಶನ ಮತ್ತು ಮಾರಾಟವನ್ನು ಒಂದು ಉದ್ಯಮವನ್ನಾಗಿ ರೂಪಿಸುವ ಮಹತ್ವಾಕಾಂಕ್ಷೆ

ಶ್ರೀ ವೀರಪ್ಪ ಮೊಯಿಲಿ ಅವರದು. ಕರ್ನಾಟಕ ಸರ್ಕಾರವು ನನ್ನನ್ನು ಪ್ರಾಧಿಕಾರದ ಮೊದಲನೆಯ ಅಧ್ಯಕ್ಷನನ್ನಾಗಿ ನೇಮಿಸಿತು. ಸರ್ಕಾರವು ಒಂದು ಸಂಸ್ಕೃತಿ ನೀತಿಯನ್ನು, ಅದರ ಭಾಗವಾಗಿ ಪುಸ್ತಕ ನೀತಿಯನ್ನು ಪ್ರಕಟಿಸಬೇಕೆಂದು ಆಗಲೇ ಸೂಚಿಸಿದ್ದೆ. ಇಂಥ ನೀತಿಯನ್ನು ಸ್ಪಷ್ಟವಾಗಿ ರೂಪಿಸುವುದು ಅಗತ್ಯ ಎಂದು ನನಗೆ ಈಗಲೂ ತೋರುತ್ತಿದೆ. ಕನ್ನಡಿಗರ ಪುಸ್ತಕಾಭಿರುಚಿಯ ಸಮೀಕ್ಷೆಯನ್ನು ನಡೆಸಬೇಕೆಂದು ನಾನು ಕೆಲಸ ಪ್ರಾರಂಭಿಸಿದೆ. ಬೇರೆ ಬೇರೆ ವಿಭಾಗಗಳ ಮತ್ತು ವರ್ಗಗಳ ಓದುಗರು ಎಂಥ ಪುಸ್ತಕಗಳನ್ನು ಕೊಳ್ಳುತ್ತಾರೆ, ಅಪೇಕ್ಷಿಸುತ್ತಾರೆ, ಈ ವಿಷಯದಲ್ಲಿ ನಗರ ಪ್ರದೇಶಕ್ಕೂ ಗ್ರಾಮೀಣ ಪ್ರದೇಶಕ್ಕೂ ವ್ಯತ್ಯಾಸಗಳುಂಟೆ, ಯುವಜನರ ಅಭಿರುಚಿ ಎಂಥದು, ಪುರುಷರಿಗೂ ಸ್ತ್ರೀಯರಿಗೂ ಓದುವ ಅಭಿರುಚಿಯಲ್ಲಿ ವ್ಯತ್ಯಾಸಗಳುಂಟೆ ಇಂಥ ಹಲವು ಅಂಶಗಳನ್ನು ಗಮನಿಸಿ ಸಮೀಕ್ಷೆ ನಡೆಸುವುದು ನನ್ನ ಉದ್ದೇಶವಾಗಿತ್ತು. ಈಗ ನಾವು ಪುಸ್ತಕ ಪ್ರಕಟಣೆ ಮತ್ತು ಮಾರಾಟದ ವಿಷಯವನ್ನು ಕುರಿತು ಯೋಚಿಸುವಾಗ ಓದುಗರ ವಿಷಯ ಖಚಿತ ಮಾಹಿತಿ ಲಭ್ಯವಿರಲಿಲ್ಲ. ಈ ಸಮೀಕ್ಷೆಗೆ ಸಿದ್ಧತೆಯಾಗುವ ಹೊತ್ತಿಗೆ ಚುನಾವಣೆಗಳಾಗಿ, ಅಧಿಕಾರಕ್ಕೆ ಬಂದ ಸರ್ಕಾರವು ನನ್ನ ರಾಜೀನಾಮೆ ಕೇಳಿತು. ಈಗಲೂ ಇಂಥ ಸಮೀಕ್ಷೆಯ ಅಗತ್ಯವಿದೆ ಎಂದು ನನ್ನ ಭಾವನೆ. ೧೯೭೦ರ ದಶಕದಲ್ಲಿ ಅಮೆರಿಕದಲ್ಲಿ ನಡೆದ ಒಂದು ಸಮೀಕ್ಷೆ ಪ್ರಕಾಶಕರ ಕಣ್ಣು ತೆರೆಸಿ ಪುಸ್ತಕ ಪ್ರಕಟಣ ಕ್ಷೇತ್ರದಲ್ಲಿ ಒಂದು ಕ್ರಾಂತಿಯನ್ನೆ ಮಾಡಿತು.

ದುಃಖದ ಸಂಗತಿ ಎಂದರೆ, ಸಣ್ಣ ವಿಷಯಗಳಲ್ಲಿ ದೊಡ್ಡ ವಿಷಯಗಳಲ್ಲಿ ರಾಜ್ಯದ ಅಧಿಕಾರಿಗಳಿಗೆ ರಾಜ್ಯದ ಪರವಾಗಿ, ರಾಜ್ಯದ ಜನರ ಪರವಾಗಿ ಎಚ್ಚರ ವಹಿಸಿ ಕೆಲಸ ಮಾಡಬೇಕು ಎಂಬ ಕಾಳಜಿ ಇದ್ದಂತಿಲ್ಲ. ಉತ್ತರ ಕನ್ನಡ ಜಿಲ್ಲೆಯ ಕಾರವಾರ, ಜೊಯಿಡಾ ಮತ್ತು ಹಳಿಯಾಳ ತಾಲ್ಲೂಕುಗಳ ಒಂದು ನೂರು ಹಳ್ಳಿಗಳನ್ನು ಗೋವಾಕ್ಕೆ ಸೇರಿಸುವ ಪ್ರಯತ್ನಗಳು ನಡೆಯುತ್ತಿವೆ ಎಂದು ವರದಿಯಾಗಿದೆ. ಈ ಪ್ರದೇಶದಲ್ಲಿ ಸಾಕಷ್ಟು ಕಾಲೇಜುಗಳಿಲ್ಲ. ಐವತ್ತು ವರ್ಷಗಳಲ್ಲಿ ಸರ್ಕಾರದ ಒಂದೇ ಒಂದು ಉದ್ದಿಮೆಯೂ ಆ ಪ್ರದೇಶಕ್ಕೆ ಕಾಲಿಟ್ಟಿಲ್ಲ, ಆದುದರಿಂದ ಅಲ್ಲಿಯ ಜನರಲ್ಲಿ ಕೆಲವರಾದರೂ ಗೋವಾದತ್ತ ಮುಖ ಮಾಡುತ್ತಾರೆ ಎಂದು ವರದಿಗಳು ಬರುತ್ತಿವೆ. ಸರ್ಕಾರ ಸ್ಪಷ್ಟನೆ ನೀಡಿಲ್ಲ.

ಭಾಷಣಗಳಲ್ಲಿ ಅಂಕಿ ಅಂಶಗಳನ್ನು ಗ್ರಹಿಸಿ ನೆನಪಿಟ್ಟುಕೊಳ್ಳುವುದು ಕಷ್ಟ ಎಂದು ನನಗೆ ಗೊತ್ತು. ಆದರೂ, ಭಾರತದಲ್ಲಿ ಎರಡನೆಯ ದರ್ಜೆಯ ಪ್ರಜೆಗಳಾಗಬೇಡಿ ಎಂದು ನಾನು ಒತ್ತಾಯದ ಮನವಿ ಮಾಡಲು ಕಾರಣಗಳನ್ನು ಸ್ಪಷ್ಟಪಡಿಸಬೇಕು. ೧೯೪೭ರಲ್ಲಿ ಭಾರತವು ಸ್ವತಂತ್ರವಾದಾಗಿನಿಂದ ಕೇಂದ್ರ ಸರ್ಕಾರವು ೨೧೫೪ ಅಂಚೆಚೀಟಿಗಳನ್ನು ಹೊರತಂದಿದೆ. ಕರ್ನಾಟಕಕ್ಕೆ ಸಂಬಂಧಿಸಿದ್ದು ೩೦ ಎಂದು ಅಧಿಕಾರಿಗಳು ಹೇಳುತ್ತಾರೆ. ಒಂದು ಭತ್ತದ ಹೊಲದ ಚಿತ್ರವಿರುವ ಅಂಚೆಚೀಟಿ, ದ್ವಾರಂ ವೆಂಕಟಸ್ವಾಮಿ ನಾಯುಡು ಅವರ ಅಂಚೆಚೀಟಿ ಎಲ್ಲವನ್ನು ಈ ೩೦ರಲ್ಲಿ ಸೇರಿಸುತ್ತಾರೆ. ಭಾರತದ ಎಲ್ಲ ಉಪರಾಷ್ಟ್ರಪತಿಗಳ ಅಂಚೆಚೀಟಿಗಳು ಬಂದಿವೆ, ಬಿ.ಡಿ.ಜತ್ತಿಯವರನ್ನು ಬಿಟ್ಟು. ವೇಮನ, ತಿರುವಳ್ಳುವರ್ ಅವರ ಅಂಚೆಚೀಟಿಗಳು ಬಂದಿವೆ, ಸರ್ವಜ್ಞನಿಲ್ಲ. ತಮಿಳುನಾಡಿನ ಐವರು ಮುಖ್ಯಮಂತ್ರಿಗಳ ಅಂಚೆಚೀಟಿಗಳು ಬಂದಿವೆ. ಕರ್ನಾಟಕದಲ್ಲಿ ಎಸ್.ನಿಜಲಿಂಗಪ್ಪನವರು ಮಾತ್ರ ಈ ಗೌರವಕ್ಕೆ ಪಾತ್ರರಾಗಿದ್ದಾರೆ. ಲಾಲ್‌ಬಾಗಿನ ಗಾಜಿನ ಮನೆಯ ಶತಮಾನೋತ್ಸವಕ್ಕೆ ಅಂಚೆಚೀಟಿ ತರಲು ಎಲ್ಲ ಸಿದ್ಧತೆ ನಡೆದಿತ್ತು. ಆದ

ಬರಲೇ ಇಲ್ಲ. ಒಟ್ಟು ೩೫ ನಾಣ್ಯಗಳು ಬಂದಿವೆ, ಕರ್ನಾಟಕಕ್ಕೆ ಸಂಬಂಧಿಸಿದಂತೆ ಬಸವೇಶ್ವರರದು ಮಾತ್ರ. ನ್ಯಾಷನಲ್ ಬುಕ್ ಟ್ರಸ್ಟ್ ಎಲ್ಲ ರಾಜ್ಯಗಳನ್ನು ಕುರಿತು ಪುಸ್ತಕಗಳನ್ನು ಪ್ರಕಟಿಸಿದೆ, ಕರ್ನಾಟಕವನ್ನು ಕುರಿತು ಇಲ್ಲ. ಭಾರತದ ದುರ್ಗಗಳ ಮೇಲೆ ಅಂಚೆಚೀಟಿಗಳ ಮಾಲೆ ಬಂತು– ಕರ್ನಾಟಕದ ಒಂದು ದುರ್ಗವೂ ಈ ಮಾಲೆಯಲ್ಲಿಲ್ಲ. ಹನ್ನೆರಡು ವಿಶ್ವವಿದ್ಯಾನಿಲಯಗಳಿಗೆ ಅಂಚೆಚೀಟಿಯ ಗೌರವ ಸಂದಿದೆ. ಭಾರತದಲ್ಲಿ ದೇಶೀಯ ಸಂಸ್ಥಾನದಲ್ಲಿ ಮೊಟ್ಟಮೊದಲು ಸ್ಥಾಪಿತವಾದ ಮೈಸೂರು ವಿಶ್ವವಿದ್ಯಾಲಯದ ನೆನಪು ಕೇಂದ್ರಕ್ಕೆ ಬರಲಿಲ್ಲ. ಬೆಂಗಳೂರಿನಲ್ಲಿ ಕೇಂದ್ರ ಸರ್ಕಾರಕ್ಕೆ ಸೇರಿದ ಜನರಲ್ ಪೋಸ್ಟ್ ಆಫೀಸ್ ಕಟ್ಟಡ ಅಂಚೆಚೀಟಿಯಲ್ಲಿ ಹೊಳೆಯುತ್ತದೆ, ಕರ್ನಾಟಕ ಸರ್ಕಾರದ ವಿಧಾನಸೌಧಕ್ಕೆ ಜಾಗವಿಲ್ಲ.

ಸ್ನೇಹಿತರೆ, ನಾನು ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿಯನ್ನು ಮಾಡುತ್ತಿದ್ದೇನೆ ಎನ್ನಿಸಬಹುದು. ಆದರೆ ವಾಸ್ತವಾಂಶಗಳು ಹೀಗಿರುವಾಗ ನಾನು ಕನ್ನಡಿಗರಿಗೆ, ಕರ್ನಾಟಕ ಸರ್ಕಾರಕ್ಕೆ ನೆನಪು ಕೊಡದೆ ಏನು ಮಾಡಲಿ? ಹೈದರಾಬಾದ್ ಕರ್ನಾಟಕದ ರೈಲ್ವೆ ಮಾರ್ಗಗಳನ್ನು ನೈಋತ್ಯ ರೈಲ್ವೆ ವಲಯದ ವ್ಯಾಪ್ತಿಯಿಂದ ಹೊರಗಿಟ್ಟಿರುವುದೇಕೆ? ಕನ್ನಡಿಗರೊಬ್ಬರು ಪತ್ರಿಕೆಯಲ್ಲಿ, "ರಾಯಚೂರು, ಗುಲ್ಬರ್ಗ ಜಿಲ್ಲೆಗಳ ಯೋಜನೆಗಳು ಸೌಲಭ್ಯಗಳಿಗಾಗಿ ಮುಂಬಯಿ ಹಾಗೂ ಸಿಕಂದರಾಬಾದ್ ವಲಯ ಕಚೇರಿಗಳತ್ತ ನೋಡಬೇಕಾಗುತ್ತದೆ" ಎಂದು ದುಃಖ ತೋಡಿಕೊಂಡಿದ್ದಾರೆ. ಬೆಂಗಳೂರಿನಿಂದ–ಮಂಗಳೂರು ರೈಲು ಎಂದು ಹೇಳಲಾಗುವ ರೈಲಿನ ಚರಿತ್ರೆಯನ್ನು ಉಡುಪಿಯಲ್ಲಿ ನಾನು ವಿವರಿಸಬೇಕಾಗಿಲ್ಲ, ರಾಜ್ಯದ ರಾಜಧಾನಿಯಿಂದ ಕರಾವಳಿ ಪ್ರದೇಶಕ್ಕೆ ರೈಲು ಸಂಚಾರವಿಲ್ಲದ ಭಾರತದ ಒಂದೇ ಒಂದು ರಾಜ್ಯ ಕರ್ನಾಟಕ ಎಂದು ಓದಿದ್ದೇನೆ. ರೈಲು ಬಂಡಿಗಳ ಮೇಲೆ ತಮಿಳು ಅಕ್ಷರಗಳನ್ನು ಬರೆಯಬಹುದು, ಕನ್ನಡ ಅಕ್ಷರಗಳನ್ನು ಬರೆದರೆ ಮೈಲಿಗೆ ಎಂದು ಕೇಂದ್ರದ ರೈಲು ಸಚಿವರು ಭಾವಿಸುವಂತೆ ಕಾಣುತ್ತದೆ. ನನ್ನ ರಾಜ್ಯದಲ್ಲಿರುವ ಊರಿನ ಹೆಸರನ್ನು ಬೆಳಗಾಂನಿಂದ ಬೆಳಗಾವಿ ಎಂದು ತಿದ್ದಲು ನಮಗೆ ಮಹಾರಾಷ್ಟ್ರದ ಅನುಮತಿ ಬೇಕು, ಕರ್ನಾಟಕದ ವಿಷಯದಲ್ಲಿ ಮಹಾರಾಷ್ಟ್ರಕ್ಕೆ ವೀಟೋ ಅಧಿಕಾರ. ಕನ್ನಡಿಗರು ಆತ್ಮಗೌರವನ್ನು ಯಾವ ಕಾರಣಕ್ಕೂ ಬಲಿಕೊಡಬಾರದು. ಕನ್ನಡಿಗರ ಆತ್ಮಗೌರವಕ್ಕೆ ಗುರಾಣಿಯಾಗುವ ಪಕ್ಷವೇ ಕನ್ನಡಿಗರ ಪಕ್ಷ. ನಿಜವಾದ ಭಾರತದರ್ಶನವು ಭಾರತದ ಎಲ್ಲ ಭಾಗಗಳನ್ನು ಗೌರವಿಸಿ ಎಲ್ಲ ಭಾಗಗಳಿಗೂ ನ್ಯಾಯ ದೊರಕಿಸಿ ಕೊಡುವುದರಲ್ಲಿದೆ ಎಂಬುದನ್ನು ಗುರುತಿಸಬೇಕು. ಎಲ್ಲ ಕನ್ನಡಿಗರಿಗಿರುವ ಹೈಕಮ್ಯಾಂಡ್ ಒಂದೇ, ಭಾರತದ ಹಿತಕ್ಕೆ ಧಕ್ಕೆ ತಾರದ ಕನ್ನಡನಾಡಿನ ಹಿತ.

ಬಂಧುಗಳೆ, ಕನ್ನಡನಾಡಿನಲ್ಲಿ ಅಂಕೋಲ ಸತ್ಯಾಗ್ರಹ, ವಿದುರಾಶ್ವತ್ಥ ಹೋರಾಟ, ಕಾಗೋಡು ಸತ್ಯಾಗ್ರಹ, ಗೋಕಾಕ್ ವರದಿ ಚಳವಳಿ ಎಲ್ಲ ನಡೆದಿವೆ. ಉಗ್ರ ಹೋರಾಟವನ್ನು ಕನ್ನಡಿಗರು ಪ್ರಾರಂಭಿಸಲೇಬೇಕಾದ್ದು ಅನಿವಾರ್ಯವಾಗುತ್ತಿದೆಯೇ ಎಂದು ಒಮ್ಮೊಮ್ಮೆ ಅನ್ನಿಸುತ್ತದೆ. ಇಂಥ ಉಗ್ರ ಹೋರಾಟಕ್ಕೆ ಕರೆ ಕೊಡಲು ನನಗೆ ಮನಸ್ಸಿಲ್ಲ. ಭಾರತದ ಅಖಂಡತೆ, ಸಮಗ್ರತೆ, ವಿವಿಧ ಸಮುದಾಯಗಳಲ್ಲಿ ಸೌಹಾರ್ದ ಇವು ಅತ್ಯಂತ ಮುಖ್ಯವಾದವು. ಕನ್ನಡಿಗರ ಮನಸ್ಸು ತೀರ ಕಹಿಯಾಗದಂತೆ ನಡೆದುಕೊಳ್ಳುವ ಹೊಣೆಗಾರಿಕೆ ಕೇಂದ್ರ ಸರ್ಕಾರದ್ದು, ರಾಜಕೀಯ ಪಕ್ಷಗಳ ಸ್ಥಳೀಯ ನಾಯಕರದು.

* * *

ಜನಪದ ವ್ಯಕ್ತಿ

ಹಣಮಂತ ದೇವನೂರ

– *ಆನಂದ ತೀರ್ಥ ಪ್ಯಾಟಿ*

ಬೆಳಗ್ಗೆ ಸ್ನಾನ ಮುಗಿಸಿ, ಉಪಹಾರ ಸೇವಿಸಿ ತಮ್ಮ ಆಟೋ ಸ್ವಚ್ಛಗೊಳಿಸಿ, ಬಸ್‌ನಿಲ್ದಾಣ ಅಥವಾ ರೈಲು ನಿಲ್ದಾಣದತ್ತ ಆಟೋ ಚಾಲಕರು ಹೊರಡುವ ಹೊತ್ತಿಗೆ ಹಣಮಂತ ದೇವನೂರ ಕುಷ್ಠರೋಗಿಗಳ ಕೈ–ಕಾಲುಗಳ ಗಾಯಕ್ಕೆ ಮುಲಾಮು ಹಚ್ಚಿ, ಬ್ಯಾಂಡೇಜ್ ಹಾಕುತ್ತಿರುತ್ತಾರೆ, ಕುಷ್ಠರೋಗಿಗಳೆಂದರೆ ಮೈಲು ದೂರ ಹಾರುವ ಜನರು ನಮ್ಮ ಮಧ್ಯೆ ಇರುವಾಗ ಹಣಮಂತನಂಥ ಯುವಕ ಆ ರೋಗಿಗಳ ಮೈತಡವಿ, ಸಾಂತ್ವನ ಹೇಳಿ ಗಾಯ ಒರೆಸಿ, ಬ್ಯಾಂಡೇಜ್ ಸುತ್ತುತ್ತಾರೆ.

ಗುಲ್ಬರ್ಗದ ದೇವಿನಗರದಲ್ಲಿನ 'ಗಾಂಧಿ ಕುಷ್ಠರೋಗಿಗಳ ಕಾಲೋನಿ'ಯ ಒಳಹೊಕ್ಕರೆ ವಿಷಾದದ ಛಾಯೆ ಆವರಿಸುತ್ತದೆ. ಕುಷ್ಠರೋಗದ ಲಕ್ಷಣ ಕಂಡುಬಂದ ತಾಯಿಯನ್ನು ಮನೆಯಿಂದ ಹೊರ ಹಾಕಿದವರಿದ್ದಾರೆ. ಕಷ್ಟಪಟ್ಟು ದುಡಿದು ಸಾಕಿದ ತಂದೆಗೆ ರೋಗ ಬಂದಿದೆ ಎಂದು ಗೊತ್ತಾದ ದಿನವೇ ದೂರದ ಹೊಲದಲ್ಲಿ ಗುಡಿಸಲು ಹಾಕಿಕೊಟ್ಟು ಅಲ್ಲೇ ಇರುವಂತೆ ತಾಕೀತು ಮಾಡಿದ ಮಕ್ಕಳಿದ್ದಾರೆ. ಅಣ್ಣನೇ ತಮ್ಮನನ್ನು ಮನೆಯಿಂದ ಹೊರಹೋಗಲು ಹೇಳಿದ್ದಾನೆ. ಅಂಥವರೆಲ್ಲ ಇಲ್ಲಿ ಬಂದು ಸೇರಿದ್ದಾರೆ.

ಇಂಥವರ ಸೇವೆಗೆ ಹಣಮಂತ ದೇವನೂರ ಸದಾ ಸಿದ್ಧ. 'ತಾಯಿಗೆ ಕುಷ್ಠರೋಗದ ಲಕ್ಷಣ ಕಂಡುಬಂದ ಕೂಡಲೇ ತಂದೆ ಕುಟುಂಬ ತೊರೆದು ಹೋದ. ನನಗೆ ಆಗ ಒಂದು ವರ್ಷ ವಯಸ್ಸು. ತಂದೆ ಮುಖ ನೋಡಿದ ನೆನಪಿಲ್ಲ. ಆದರೆ ಆತನ ಬಗ್ಗೆ ನನ್ನಮ್ಮ ಹೇಳಿದಾಗ ಆಘಾತ ಉಂಟಾಗಿತ್ತು' ಎಂದು ನೆನಪಿಸಿಕೊಳ್ಳುತ್ತಾರೆ ಹಣಮಂತ.

ತಾಯಿ ಬೇಡುತ್ತಿದ್ದ ಭಿಕ್ಷೆಯೇ ಜೀವನಕ್ಕೆ ಆಧಾರ. ಆದರೆ ಕುಷ್ಠರೋಗದಿಂದ ಆಕೆ ನರಳುವುದು ಹೆಚ್ಚಾದಾಗ, ಎಲ್ಲೆಲ್ಲೋ ಕರೆದೊಯ್ದು ಚಿಕಿತ್ಸೆ ಕೊಡಿಸಿದರು. ಕಾಲಿದ್ದವರು ಆಸ್ಪತ್ರೆಗೆ ಹೋಗುತ್ತಾರೆ. ಇಲ್ಲದವರು ..? ಅಂಥವರಿಗೆ ನೆರವು ನೀಡಲು ಹಣಮಂತ ನಿರ್ಧರಿಸಿದರು. ತಾಯಿಗೆ ಆಗಿದ್ದ ಗಾಯಗಳಿಗೆ ಚಿಕಿತ್ಸೆ ನೀಡಿದ ಅನುಭವವಿತ್ತು. ಇದರ ಜತೆಗೆ ರಾಷ್ಟ್ರೀಯ ಕುಷ್ಠರೋಗ ನಿಯಂತ್ರಣ ಕೇಂದ್ರದಲ್ಲಿ ತರಬೇತಿ ಪಡೆದ ಬಳಿಕ, ಕಾಲೋನಿಯಲ್ಲೇ ಒಂದು ಕೇಂದ್ರ ತೆರೆದರು. ಪ್ರಸ್ತುತ ವಾರದಲ್ಲಿ ನಾಲ್ಕು ದಿನ ಬೆಳಿಗ್ಗೆ ೮ರಿಂದ ೧೦ರ ವರೆಗೆ ರೋಗಿಗಳಿಗೆ ಹಣಮಂತ ಚಿಕಿತ್ಸೆ ನೀಡುತ್ತಾರೆ. ಮುಂಬೈನ ಸಮಾಜಸೇವಕ ಮೈಕೆಲ್ ಡಿಸೋಜಾ ಔಷಧಿ ವೆಚ್ಚ ಭರಿಸುತ್ತಾರೆ.

ಮಕ್ಕಳು ಮನೆಯಿಂದ ಹೊರ ಹಾಕಿದರೂ ಇಲ್ಲಿ ಹಣಮಂತ ನೀಡುವ ಸೇವೆಯನ್ನು ರೋಗಿಗಳು ಸ್ಮರಿಸುತ್ತಾರೆ. 'ನಮ್ಮನ್ನ ಯಾರೂ ಮುಟ್ಟೋಲ್ಲ. ಆದರೆ ಹಣಮಂತ ಮಾತ್ರ ದೇವರ ಹಾಗೆ ಬಂದಾನೆ' ಎಂದು ಸಿದ್ಧಲಿಂಗ, ಲಕ್ಷ್ಮೀಬಾಯಿ ಭಾವುಕರಾಗಿ ನುಡಿಯುತ್ತಾರೆ. 'ನಮ್ಮ ಮಕ್ಕಳು–ಸೊಸೆಯಂದಿರು ನಮ್ಮನ್ನು ಓಡಿಸಿದರು. ನೀನಾದ್ರೂ ಇದ್ದೀಯಲ್ಲ ಅಷ್ಟೇ ಸಾಕು' ಎಂದು ಕೊಂಡಾಬಾಯಿ ಕಣ್ಣೀರಿಡುತ್ತ ಹೇಳುತ್ತಾಳೆ.

ಕೇವಲ ಚಿಕಿತ್ಸೆ ಮಾತ್ರವಲ್ಲದೇ, ಕಾಲೋನಿಯ ಅಭಿವೃದ್ಧಿಗೆ ಹಣಮಂತ ಸಾಕಷ್ಟು ಶ್ರಮ ವಹಿಸಿದ್ದಾರೆ. ಬೆಂಕಿ ಅನಾಹುತದಲ್ಲಿ ಇಲ್ಲಿನ ಗುಡಿಸಲುಗಳು ಭಸ್ಮವಾದಾಗ,

ಅಧಿಕಾರಿಗಳು ಹಾಗೂ ಶಾಸಕರ ಬಳಿ ತೆರಳಿ ಎಲ್ಲರಿಗೂ ಆಶ್ರಯ ಮನೆ ಸಿಗುವಂತೆ ಮಾಡಿದ್ದಾರೆ. ಈ ಮನೆಗಳಿಗೆ ವಿದ್ಯುತ್ ಸೌಲಭ್ಯ ಬಂದಿದೆ. ೬೫ ಜನರಿಗೆ ಅಂಗವಿಕಲರ ವೇತನ ಸಿಕ್ಕಿದೆ. ವಿವಿಧ ಯೋಜನೆಯಡಿ ಕೆಲವರಿಗೆ ಸಾಲ ದೊರೆತಿದೆ. **ನೆನಪಿಡಿ:** ಇದಕ್ಕೆಲ್ಲ ಅರ್ಜಿ ಸಿದ್ಧಪಡಿಸಿ ಮತ್ತೆ ಮತ್ತೆ ಕಚೇರಿಗೆ ಓಡಾಡಲು ಹಣಮಂತ ಖರ್ಚು ಮಾಡಿದ್ದು, ತಾವೇ ದುಡಿದ ಹಣ. ಅದೂ ಆಟೋ ಓಡಿಸಿ ಸಂಪಾದಿಸಿದ್ದು. **ಕಂಪ್ಯೂಟರ್ ಬಂತು:** ತಿಂಗಳಿಗೆ ಸಾವಿರ ರುಪಾಯಿ ಸಂಗ್ರಹಿಸಿ, ಅದರ ಹಣದಿಂದ ಎರಡು ಕಂಪ್ಯೂಟರ್ ಖರೀದಿಸಿದ ಹಣಮಂತ, ಕುಷ್ಠರೋಗಿಗಳ ಮಕ್ಕಳಿಗೆ ತರಬೇತಿ ವ್ಯವಸ್ಥೆ ಕಲ್ಪಿಸಿದ್ದಾರೆ. ಆರು ಮಕ್ಕಳು ಒಂದು ವರ್ಷದಿಂದ ಕಂಪ್ಯೂಟರ್ ಕಲಿಯುತ್ತಿದ್ದಾರೆ. ಎಂಟು ಹೊಲಿಗೆ ಯಂತ್ರ ಬಂದಿದ್ದು, ಆರು ಮಹಿಳೆಯರು ತರಬೇತಿ ಪಡೆಯುತ್ತಿದ್ದಾರೆ. 'ಮೊದಲ ಬಾರಿಗೆ ಶಾಲೆಯೊಂದಕ್ಕೆ ಸಮವಸ್ತ್ರ ಹೊಲಿದು ಕೊಡಲು ಟೆಂಡರ್ ಸಿಕ್ಕಿದೆ' ಎಂದು ಖುಷಿಯಿಂದ ಹೇಳುತ್ತಾರೆ ಹಣಮಂತ.

ಬೆಳಿಗ್ಗೆ ಕುಷ್ಠರೋಗಿಗಳ ಸೇವೆ ಮಾಡುವ ಇವರು, ೧೧ರಿಂದ ಮಧ್ಯಾಹ್ನ ೩ರ ವರೆಗೆ ಆಟೋ ಓಡಿಸುತ್ತಾರೆ. ನಂತರ ಸಂಜೆ ಪತ್ರಿಕೆಯೊಂದರ ವಿತರಣೆ. ಸಂಜೆ ಮತ್ತೆ ಆಟೋ ಓಡಿಸಿದರೆ, ಕುಷ್ಠರೋಗಿಗಳಿಗೆ ವಿವಿಧ ಸೌಲಭ್ಯ ಕೊಡಿಸಲು ಸಿದ್ಧತೆ ರಾತ್ರಿ ಸಮಯದಲ್ಲಿ ನಡೆಯುತ್ತದೆ. ಪದೇ ಪದೇ ಕಚೇರಿಗಳಿಗೆ ಎಡತಾಕುವುದು, ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳನ್ನು ಭೇಟಿ ಮಾಡಿ, ಮನವಿ ಸಲ್ಲಿಸುವುದು ಇದ್ದಿದ್ದೇ. 'ಅಷ್ಟು ಗಂಟು ಬಿದ್ದರೆ ಮಾತ್ರ ಕೆಲಸವಾಗುತ್ತದೆ. ಆದರೆ ಅಧಿಕಾರಗಳ ಪೈಕಿ ಕೆಲವರು ನಮ್ಮ ಸ್ಥಿತಿ ನೋಡಿ ಸಹಾಯ ಮಾಡುತ್ತಾರೆ' ಎನ್ನುತ್ತಾರೆ.

ಕುಷ್ಠರೋಗ ನಿವಾರಣೆಗೆ ಹಲವು ಔಷಧಿಗಳು ಬಂದಿವೆ. ಆದರೆ ಜನರ ಮನಸ್ಸಿನಲ್ಲಿ 'ರೋಗ' ಇನ್ನೂ ನಿವಾರಣೆಯಾಗಿಲ್ಲ. ಸಾಮಾನ್ಯ ವ್ಯಕ್ತಿ ಕುಷ್ಠರೋಗಿಗಳನ್ನು ನೋಡಲು ಕೂಡ ಹಿಂಜರಿಯುತ್ತಾರೆ. ಆದರೆ ಕುಷ್ಠರೋಗಿಗಳ ಶುಶ್ರೂಷೆಯಲ್ಲಿ ಸಾರ್ಥಕತೆ ಕಾಣುವ ಈ ಯುವಕನ ಸೇವೆ ಎಂಥವರಲ್ಲೂ ಮೆಚ್ಚುಗೆ ಮೂಡಿಸುತ್ತದೆ.

(ಸಾಭಾರ: ಪ್ರಜಾವಾಣಿ)

ಸಂತಾಪ

೨೦೦೮ ಫೆಬ್ರವರಿ ೯ ರಂದು ಬಾಬಾ ಆಮ್ಟೆ ನಿಧನರಾದರು. ಅವರ ನಿಧನದಿಂದಾಗಿ ಗಾಂಧಿ ವಿಚಾರ ಪ್ರಣೀತ ರಚನಾತ್ಮಕ ಕ್ಷೇತ್ರದ ಹಿರಿಯ ನಾಯಕನೊಬ್ಬನನ್ನು ದೇಶ ಕಳೆದುಕೊಂಡಿತು. ದೇಶದ ಇಂದಿನ ಪರಿಸ್ಥಿತಿಯಲ್ಲಿ ಹಲವಾರು ಬಗೆಯ ಶುದ್ಧ ರಚನಾತ್ಮಕ ಕಾರ್ಯಗಳು ಅಗತ್ಯವಿರುವ ಸಮಯದಲ್ಲಿ ಬಾಬಾ ಆಮ್ಟೆಯವರ ನಿಧನ ದೇಶಕ್ಕೆ ತುಂಬಾ ನಷ್ಟವನ್ನುಂಟು ಮಾಡಿದೆ. ಆದರೆ ಅವರು ಬೆಳಗಿಸಿದ ರಚನಾತ್ಮಕ ಕಾರ್ಯದ ದೀಪ ಆ ಕ್ಷೇತ್ರದಲ್ಲಿ ಆಸಕ್ತಿಯುಳ್ಳವರಿಗೆ ದಾರಿ ತೋರಿಸುತ್ತದೆ. ಆಮ್ಟೆಯವರ ನಿಧನಕ್ಕಾಗಿ ಜನಪದ ವಿಚಾರ ತನ್ನ ಸಂತಾಪವನ್ನು ವ್ಯಕ್ತಪಡಿಸುತ್ತದೆ.

ಗ್ರಾಮಜೀವನ ಮತ್ತು ವಿಶ್ವನಾಗರಿಕತ್ವದ ಬಗ್ಗೆ ಗಾಂಧೀ ಮತ್ತು ಟಾಗೋರ್

- ಗುರುದಯಾಳ್ ಮಲ್ಲಿಕ್

ಶತಮಾನಗಳಿಂದ ಗ್ರಾಮವು ಭಾರತದಲ್ಲಿ ಸಾಂಸ್ಕೃತಿಕ ಕೇಂದ್ರವಾಗಿದೆ. ಅಲ್ಲಿಯ ಪ್ರತಿಯೊಬ್ಬನೂ ಬೆವರು ಸುರಿಸಿಯೇ ತನ್ನ ಅನ್ನವನ್ನು ಸಂಪಾದಿಸುತ್ತಾನೆ. ಜನರ ಜೀವನ ಸರಳವಾಗಿರುತ್ತದೆ. ಅಂಥವರು ಧರ್ಮದ ಪರೋಕ್ಷ ಪ್ರಭಾವಕ್ಕೆ ಒಳಗಾಗುವುದು ಸುಲಭ. ಒಳ್ಳೆಯ ನೆರೆಹೊರೆ ಸಂಬಂಧದಲ್ಲಿ, ತಕ್ಷಣವೇ ಸ್ನೇಹಪರವಾಗಿ ಮತ್ತು ಪ್ರಾಮಾಣಿಕವಾಗಿ ಇರುವುದರಲ್ಲಿ ಮತ್ತು ತೃಪ್ತಿ ಹಾಗೂ ಸೌಹಾರ್ದತೆಯನ್ನು ಬೆಳೆಸಿಕೊಳ್ಳುವುದರಲ್ಲಿ ಅವರು ಭಗವಂತನ ಅಸ್ತಿತ್ವವನ್ನು ಅನುಭವಿಸುತ್ತಾರೆ. ಈ ಕಾರಣದಿಂದಾಗಿಯೇ ಅಲ್ಲವೆ ದೇವರು ಗ್ರಾಮವನ್ನು ಸೃಷ್ಟಿಸಿದರೆ, ಮನುಷ್ಯ ನಗರವನ್ನು ಸೃಷ್ಟಿಸಿದ ಎಂದು ಕವಿ ಹಾಡಿದ್ದು?

ಗ್ರಾಮಗಳ ಪುನರ್‌ಸ್ಥಾಪನೆಗಾಗಿ ಗಾಂಧೀಜಿ ಮತ್ತು ಗುರುದೇವರು ಬಹಳ ಕಷ್ಟಪಟ್ಟರು; ಅದಕ್ಕಾಗಿ ಅವರು ಅನೇಕ ವಿವಿಧೋದ್ದೇಶ್ಯದ ಯೋಜನೆಗಳನ್ನೂ, ಕಾರ್ಯಕ್ರಮಗಳನ್ನೂ ಪ್ರಾರಂಭಿಸಿದರು. ಇವು ಅವರ ದೇಶಾಭಿಮಾನದ ಸಂಕೇತವಾಗಿದ್ದವು. ಸಮಸ್ಯೆಯ ಪರಿಹಾರದ ಬಗ್ಗೆ ಅವರ ಪ್ರಾರಂಭಿಕ ಕ್ರಮ ಬೇರೆ-ಬೇರೆಯಾಗಿದ್ದವು. ಸ್ಫೂರ್ತಿರಹಿತ ಮತ್ತು ಹತಾಶಾಭಾವದ ಗ್ರಾಮಗಳನ್ನು ಉಲ್ಲಸಿತಗೊಳಿಸಬೇಕೆಂಬುದು ಟಾಗೋರರ ಪ್ರಥಮ ಕಾಳಜಿಯಾಗಿತ್ತು. ಅದಕ್ಕಾಗಿ ಅವರು ಜನಪದ ಗೀತೆ, ಜನಪದ ನೃತ್ಯ, ಜನಪದ ಸಾಹಿತ್ಯವನ್ನು ಪುನರುಜ್ಜೀವಿತಗೊಳಿಸಲು ಬಯಸಿದರು. ಹಾಗೆ ಮಾಡುವುದರ ಮೂಲಕ ಗ್ರಾಮಗಳು ಅಸಂತೋಷದ ಗಾಢ ನಿದ್ರೆಯಿಂದ ಮತ್ತು ಆಘಾತದ ಮುಖಮುದ್ರೆಯಿಂದ ಬಿಡುಗಡೆ ಹೊಂದುಬಹುದೆಂಬುದಾಗಿ ಆಣಿಸಿದ್ದರು. ಆದರೆ ಗಾಂಧೀಜಿ ಗ್ರಾಮಗಳ ಈ ಶೋಚನೀಯ ಸ್ಥಿತಿಗೆ ಕಿತ್ತು ತಿನ್ನುವ ಅವುಗಳ ಬಡತನವೇ ಕಾರಣವೆಂದು ತಿಳಿದಿದ್ದರು. ಆದ್ದರಿಂದ ಈ ಬಡತನದ ವಿರುದ್ಧ ತಮ್ಮ ಹೋರಾಟವನ್ನು ಚರಖದ ಪುನರ್‌ಸ್ಥಾಪನೆಯೊಂದಿಗೆ ಪ್ರಾರಂಭಿಸಿದರು. ಚರಕದ ಉದ್ಯೋಗದ ಮೂಲಕ ಗ್ರಾಮಗಳು ತಮ್ಮ ಜೀವನವನ್ನು ಕಷ್ಟದಲ್ಲಿ ಹೇಗೋ ಸಾಗಿಸಬಹುದು. ಆನಂತರ ಅವರಿಗೆ ಹೊಸ ವಿಚಾರಗಳಿಗೂ, ಬದಲಾವಣೆಗೂ ತಮ್ಮ ಮನಸ್ಸುಗಳನ್ನು ತೆರೆಯಲು ಸಾಧ್ಯವಾಗುವುದು ಮತ್ತು ನಂತರ ತಮ್ಮ ಸ್ಥಳೀಯ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಪುನರುಜ್ಜೀವಿತಗೊಳಿಸಬಹುದು.

ಈ ರೀತಿಯಲ್ಲಿ ಗಾಂಧೀಜಿ ಮತ್ತು ಗುರುದೇವರಿಬ್ಬರೂ ಶಿಕ್ಷಿತರನ್ನು ಮೋಹಗೊಳಿಸುತ್ತಿದ್ದ ಪಾಶ್ಚಿಮಾತ್ಯ ಕೈಗಾರೀಕರಣವನ್ನು ವಿರೋಧಿಸಿದರು. ನೂರಕ್ಕೆ ಎಂಭತ್ತರಷ್ಟು ಜನರು ಗ್ರಾಮಗಳಲ್ಲಿ ವಾಸಿಸುವುದಾದರೆ ಗ್ರಾಮೀಣರ ಸ್ವಭಾವ ಹಾಗೂ ವ್ಯವಹಾರದಲ್ಲಿ ಎಲ್ಲ ಪರಿವರ್ತನೆ ಮತ್ತು ಸುಧಾರಣೆ ಅವರ ಪರಂಪರೆಗೆ ಅನುಗುಣವಾಗಿರಬೇಕು. ಆದರೆ ಆ ಪರಂಪರೆಯಿಂದ ಒಳ್ಳೆಯದನ್ನು ಮತ್ತು ಕ್ರಿಯಾಶೀಲತೆಗೂ ಹಾಗೂ ಆಲೋಚನೆಗೂ ಪ್ರೇರಣೆ ಕೊಡುವಂಥ ಒಳ್ಳೆಯದನ್ನು ಮಾತ್ರ ಅಂಗೀಕರಿಸಬೇಕು. ಹಿಂದಿನ ಕಾಲದಲ್ಲಿ ಆಧ್ಯಾತ್ಮಿಕ ಅಥವಾ ಮಾನವೀಯ ಮೌಲ್ಯಗಳನ್ನು ಕೇವಲ ಭೌತಿಕ ಲಾಭದ ಆಕರ್ಷಣೆಯಿಂದ ಸಾಧ್ಯವಾದಷ್ಟು ರಕ್ಷಿಸುತ್ತಿದ್ದರು. ಎಂಥ ಬೆಲೆತೆತ್ತಾದರೂ ಮಾನವನ ಘನತೆಯನ್ನು ಮಾನ್ಯ ಮಾಡಲಾಗುತ್ತಿತ್ತು ಮತ್ತು ಅದನ್ನು ರಕ್ಷಿಸಲಾಗುತ್ತಿತ್ತು. ಆದ್ದರಿಂದ ಮಂದಿರ ಅಥವಾ

ಮಸೀದಿ ಗ್ರಾಮದ ಹೃದಯದಲ್ಲಿತ್ತೇ ವಿನಃ ಮಾರುಕಟ್ಟೆಯಲ್ಲಲ್ಲ. ಅತ್ಯಂತ ಗೌರವಾನ್ವಿತ ವ್ಯಕ್ತಿ ವ್ಯಾಪಾರಿಯಾಗಿದ್ದಿರದೆ ಗುರು ರೂಪದಲ್ಲಿಯ ಅರ್ಚಕನಾಗಿದ್ದ.

ಗಾಂಧೀಜಿ ಮತ್ತು ಗುರುದೇವ ಇಬ್ಬರೂ ವಿಶ್ವ ಪ್ರಜೆಗಳಾಗಿದ್ದರು. ಸ್ವತಂತ್ರ ಚೇತನರು ಮಾತ್ರ ಅಂಥ ಪ್ರಜೆಗಳಾಗಬಲ್ಲರು. ಆ ಮೂಲಕ ಅವರು ಪ್ರಾದೇಶಿಕತೆ ಮತ್ತು ಎಲ್ಲ ಪ್ರಕಾರದ ದ್ವೇಷಾಸೂಯೆಗಳನ್ನು ದಾಟಬಲ್ಲರು. ಇದೇ ಅಲ್ಲವೆ ನಿಜ ಸಂಸ್ಕೃತಿಯ ಮನುಷ್ಯನ ಲಕ್ಷಣ?

ಆದರೆ ವಿಶ್ವನಾಗರಿಕತೆಯನ್ನು ಕೇವಲ ಪ್ರಪಂಚದ ವಿವಿಧ ಭಾಗಗಳಲ್ಲಿ ಪ್ರವಾಸ ಮಾಡುವುದರಿಂದ ಸಂಪಾದಿಸಲಾಗುವುದಿಲ್ಲ. ಹಾಗೆ ಸಂಪಾದಿಸುವುದಾಗಿದ್ದರೆ ಓರ್ವ ವ್ಯಕ್ತಿ ಇನ್ನೂ ತನ್ನ ಹದಿಹರೆಯದಲ್ಲಿದ್ದಾಗಲೆ ಪೃಥ್ವಿಯನ್ನು ತನ್ನ ಉಡುದಾರಕ್ಕೆ ಕಟ್ಟಿಕೊಳ್ಳುವುದರ ಮೂಲಕ ಅವನು ವಿಶ್ವನಾಗರಿಕತ್ವಕ್ಕೆ ಅರ್ಹನಾಗಬಹುದು. ಆದರೆ ಇದು ಸಂಭವವಲ್ಲ. ಆ ರೀತಿ ಸಂಭವಿಸಿದಲ್ಲಿ ಮುಂದಿನ ವಿದ್ಯಾಭ್ಯಾಸಕ್ಕಾಗಿ ವಿದೇಶಗಳಿಗೆ ಹೋದ ವಿದ್ಯಾರ್ಥಿಗಳು ನೇರವಾಗಿ ವಿಶ್ವನಾಗರಿಕರಾಗಬಹುದು. ಆದರೆ ಅಂಥ ಭೇಟಿಗಳು ಆ ವಿದ್ಯಾರ್ಥಿಗಳಿಗೆ ಅಪಾಯಕಾರಿಯಾದದ್ದು ಕಂಡು ಬಂದಿದೆ. ಏಕೆಂದರೆ ಆ ವಿದ್ಯಾರ್ಥಿಗಳು ತಮ್ಮ ಸ್ವಂತ ದೇಶದ ಸಂಸ್ಕೃತಿ, ಧರ್ಮ ಮತ್ತು ಪ್ರತಿಭೆಯಲ್ಲಿ ಅವರ ಜೀವನದ ಬೇರುಗಳು ಗಟ್ಟಿಯಾಗಿರುವುದಿಲ್ಲ. ಗಾಂಧೀಜಿ ಮತ್ತು ಗುರುದೇವರವರ ಜಿವನದ ಸಂಗಾತಿಯಾಗಿದ್ದ ಸಿ.ಎಫ್.ಆಂಡ್ರೂಸ್ ಪ್ರಾಮಾಣಿಕವಾಗಿ ಮತ್ತು ನೋವಿನಿಂದ ಈ ರೀತಿ ಹೇಳಿದ್ದಾರೆ :

"ತಮ್ಮ ಮಕ್ಕಳು ಚಿಕ್ಕವರಿದ್ದಾಗ ಮತ್ತು ಅಪಕ್ವವಾಗಿದ್ದಾಗ ಮತ್ತು ಸ್ವದೇಶದ ಧರ್ಮ ಮತ್ತು ಸಂಸ್ಕೃತಿಯಲ್ಲಿ ಬಲವಾಗಿ ನೆಲೆನಿಲ್ಲದೆ ಇರುವಾಗ ವಿದೇಶಗಳಿಗೆ ಉನ್ನತ ಶಿಕ್ಷಣಕ್ಕಾಗಿಯೂ ಕಳುಹಿಸಬಾರದೆಂದು ನಾನು ಪ್ರತಿಯೊಬ್ಬ ಭಾರತೀಯ ತಂದೆ-ತಾಯಿಗಳನ್ನು ಹೃತ್ಪೂರ್ವಕವಾಗಿ ಪ್ರಾರ್ಥಿಸುತ್ತೇನೆ."

ಒಂದು ಮರವು ತನ್ನ ಬೇರುಗಳನ್ನು ಸ್ಥಳೀಯವಾಗಿರುವಂಥ ಮಣ್ಣಿನಲ್ಲಿ ಹೊಂದಿರುತ್ತದೆ. ಕ್ರಮೇಣ ಆ ಮರವು ಸೂರ್ಯನ ಪ್ರಕಾಶಕ್ಕೆ ಬರುತ್ತದೆ. ಮತ್ತು ಆಕಾಶದತ್ತ ಚಾಚಿಕೊಳ್ಳುತ್ತದೆ. ತನ್ನ ಸ್ವಂತ ಜೀವನದ ಅಂಗವಾಗಿ ಮೊಗ್ಗುಗಳನ್ನು, ಹೂವು ಹಾಗೂ ಹಣ್ಣುಗಳನ್ನು ಹೊತ್ತುಕೊಳ್ಳುತ್ತದೆ. ಆದರೆ ಆ ಮರದ ಬೇರುಗಳು ಮಣ್ಣಿನಲ್ಲಿ ಬೆಳೆಯುತ್ತಾ ಹೋಗುವ ಕೆಲಸ ದೀರ್ಘವಾದುದು, ಶ್ರಮದಾಯಕವಾದುದೂ ಆಗಿರುತ್ತದೆ. ಇದೇ ರೀತಿಯಲ್ಲಿ ಓರ್ವ ವ್ಯಕ್ತಿಯ ರಾಷ್ಟ್ರೀಯ ಭಾವನೆಗೆ ಬೇರೊಂದು ಬಣ್ಣವನ್ನು ಹಚ್ಚಲು ಸಾಧ್ಯವಿಲ್ಲ. ವಿಶೇಷ ಪ್ರಯತ್ನದ ನಂತರ ಹೀಗೆ ಮಾಡಲು ಸಾಧ್ಯ.

ಆದ್ದರಿಂದ ಯಾರಾದರೂ ಮೊದಲು ತನ್ನ ಸ್ವಂತ ಸಂಸ್ಕೃತಿ, ಸಾಹಿತ್ಯ ಮತ್ತು ಧರ್ಮದ ಬಗ್ಗೆ ಸಾಕಷ್ಟು ಜ್ಞಾನವನ್ನು ಪಡೆಯದೆ ವಿದೇಶಕ್ಕೆ ಹೋದರೆ ಅವನು ಯಾವ ದೇಶಕ್ಕೆ ಅಲ್ಪಕಾಲಕ್ಕಾಗಲಿ, ದೀರ್ಘಕಾಲಕ್ಕಾಗಲಿ ಹೋಗಿರುತ್ತಾನೊ ಆ ದೇಶದ ಸಂಸ್ಕೃತಿಯಿಂದ ಹೇಳಿಕೊಳ್ಳುವಂಥ ಪ್ರಯೋಜನವನ್ನು ಪಡೆಯಲಾರ.

ಗಾಂಧೀಜಿ ಮತ್ತು ಗುರುದೇವರು ತಮ್ಮ ದೇಶದ ಧರ್ಮ, ಸಾಹಿತ್ಯ ಮತ್ತು ಸಂಸ್ಕೃತಿಯೊಂದಿಗೆ ಹೊಂದಿದ್ದ ಸಂಪರ್ಕದಿಂದಾಗಿ ಅವರು ವಿಶ್ವದ ಬೇರೆ ಸಂಸ್ಕೃತಿ ಮತ್ತು ಧರ್ಮಗಳಿಂದ ಪ್ರಯೋಜನ ಪಡೆದರು. ಆ ಪ್ರಯೋಜನವನ್ನು ತಮ್ಮ ದೇಶದ ಸಹಪ್ರಜೆಗಳ ಅನುಕೂಲಕ್ಕಾಗಿ ಉಪಯೋಗಿಸಿದರು. ಅಲ್ಲದೆ ವಿಶ್ವದ ಮೌಲ್ಯಗಳಾದ ಮಾನವೀಯ ಮೌಲ್ಯಗಳನ್ನು ಅರ್ಥಮಾಡಿಕೊಳ್ಳಲು ನೆರವಾದರು.

* * * — ಅನು: ಸು.ಕೌ.

ಘಟಿಕೋತ್ಸವ ಸಮಾರಂಭದಲ್ಲಿ ಕನ್ನಡದ ವೈಭವ

-ಡಾ॥ ಜಿ.ಎಸ್.ಶಿವರುದ್ರಪ್ಪ

(ಮೈಸೂರು ವಿಶ್ವವಿದ್ಯಾನಿಲಯದ ಎಂಭತ್ತೆಂಟನೆ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ರಾಷ್ಟ್ರಕವಿ ಡಾ.ಜಿ.ಎಸ್.ಶಿವರುದ್ರಪ್ಪನವರು ಮಾಡಿದ ಕನ್ನಡ ಭಾಷಣದ ಮುಖ್ಯಾಂಶಗಳು)

ಕರ್ನಾಟಕ ರಾಜ್ಯೋದಯವಾಗಿ ಐವತ್ತು ವರ್ಷಗಳು ಉರುಳಿದರೂ ಕನ್ನಡಕ್ಕೆ ಸಂಬಂಧಿಸಿದಂತೆ ಖಚಿತವಾದ ಭಾಷಾನೀತಿ ಹಾಗೂ ಭಾಷಾ ಯೋಜನೆಯೊಂದು ಅನುಷ್ಠಾನಕ್ಕೆ ಬಾರದೆ ನಮ್ಮ ಕಾಲದ ತೊಡಕಾದ ಸವಾಲುಗಳಲ್ಲಿ ಒಂದಾಗಿದೆ. ಒಂದು ಭೌಗೋಳಿಕ ಪರಿಸರದ ಸಂಸ್ಕೃತಿ ವಿಸ್ತಾರಗಳಿಗೂ ಅದು ಬಳಸುವ ಭಾಷೆಗೂ ಇರುವ ಸಂಬಂಧವು ಸರ್ವ ವೇದ್ಯವಾದ ಸಂಗತಿಯಾಗಿದೆ. ಕನ್ನಡವು ಕರ್ನಾಟಕದಲ್ಲಿ ವಾಸಿಸುವ ಎಲ್ಲರ ಮಾತೃಭಾಷೆಯಲ್ಲದಿದ್ದರೂ ಅದು ಪರಿಸರದಿಂದ ದತ್ತವಾದ ಪ್ರಥಮ ಭಾಷೆಯೇ ಆಗಿದೆ. ನಮ್ಮದು ಕನ್ನಡದಲ್ಲಿ ಭಾವಿಸಿದ ಜನಪದ. ಹೀಗಿರುವಾಗ ಆಡಳಿತ ಶಿಕ್ಷಣ ಮತ್ತು ಜ್ಞಾನದ ಸೃಷ್ಟಿಗಳು ಕನ್ನಡದಲ್ಲಿಯೇ ಆಗಬೇಕೆನ್ನುವುದು ಸೂರ್ಯಸ್ಪಷ್ಟವಾದ ವಿಚಾರವಾಗಿದೆ. ಅಷ್ಟೇ ಅಲ್ಲ, ಜಗತ್ತಿನ ತಿಳುವಳಿಕೆಯೆಲ್ಲವೂ ಕನ್ನಡಿಗರಿಗೆ ಕನ್ನಡದ ಮೂಲಕವೇ ಲಭ್ಯವಾಗುವಂತೆ ಕನ್ನಡ ಭಾಷೆಯನ್ನು ಸಜ್ಜುಗೊಳಿಸಬೇಕಾಗಿದೆ. ಇಂಥದ್ದೊಂದು ಸರಳವಾದ ಸಂಗತಿಯನ್ನು ಗ್ರಹಿಸುವ ರಾಜಕೀಯ ಇಚ್ಛಾಶಕ್ತಿಯನ್ನು ನಮ್ಮ ರಾಜಕೀಯ ಮುಖಂಡರಾಗಲೀ ಅವರನ್ನು ಆಯ್ಕೆ ಮಾಡುವ ಸಮುದಾಯವಾಗಲೀ ಗ್ರಹಿಸದೇ ಇರುವುದು ಸೋಜಿಗದ ಸಂಗತಿಯಾಗಿದೆ.

ಸ್ನೇಹಿತರೇ, ನಾವೂ ನೀವೂ ಬದುಕುತ್ತಿರುವ ಭಾರತೀಯ ಸಂದರ್ಭದ ಸಮಕಾಲೀನ ಜಗತ್ತು ಮಾನವೀಯ ಸಂಬಂಧಗಳು ವಿಘಟನೆಗೊಂಡ ಜಗತ್ತು; ಪ್ರತಿಯೊಂದನ್ನೂ ಮಾರುಕಟ್ಟೆಯ ಮಾಲನ್ನಾಗಿ ಪರಿವರ್ತಿಸಿ ತಕ್ಕಡಿಯಲ್ಲಿ ತೂಗುವ ಜಗತ್ತು; ಮನುಷ್ಯರನ್ನು ಹಿಡಿದು ಕೂಡಿಸಬೇಕಾದ ಮತ-ಧರ್ಮಗಳು ಧುತ್ತೆಂದು ಅಡ್ಡ ಗೋಡೆಗಳಾಗಿ ನಿಲ್ಲುವ ಜಗತ್ತು; ಲೋಕಕ್ಕೇ ಮಾರ್ಗದರ್ಶಕವಾಗಬಲ್ಲ ಮಹತ್ವದ ಚಿಂತನೆಗಳ ಒಂದು ಸುದೀರ್ಘ ಪರಂಪರೆಯಿದ್ದೂ ಅದಕ್ಕೂ ನಮಗೂ ಇರಬೇಕಾದ ಸಂಬಂಧವನ್ನು ಕಳಚಿಕೊಂಡು ಭ್ರಷ್ಟವಾದ ಜಗತ್ತು; ವಿಜ್ಞಾನ ತಂತ್ರಜ್ಞಾನಗಳ ಅದ್ಭುತವಾದ ಪ್ರಗತಿಯ ನಡುವೆಯೂ ಅವೈಚಾರಿಕತೆ ಮೂಢನಂಬಿಕೆಗಳು ಬದುಕನ್ನು ಇನ್ನೂ ಗುತ್ತಿಗೆ ಹಿಡಿದುಕೊಂಡ ಜಗತ್ತು; ಸಂವಿಧಾನದ ಆಶಯಗಳಿಗೆ ವಿರುದ್ಧವಾದ ರೀತಿಯಲ್ಲಿ ಸಮಾಜದ ಮೇಲುವರ್ಗದವರಿಂದ ಕೆಳವರ್ಗದವರ ಮೇಲೆ ನಿರಂತರವಾಗಿ ನಡೆಯುತ್ತಿರುವ ಶೋಷಣೆಗಳ ಜಗತ್ತು; ಸರ್ವೋದಯದ ಕನಸು ಕಂಡ ಮಹಾತ್ಮಾಗಾಂಧಿಯವರನ್ನು

ಬಿಟ್ಟು ಬಹುದೂರ ಬಂದಿರುವ ಹಿಂಸಾರಭಸಮತಿಯಾದ ಜಗತ್ತು.

ಈಗ ಪ್ರಸ್ತಾಪಿಸಿದ ಕೆಲವು ಆತಂಕಗಳನ್ನು ವಿಸ್ತರಿಸಿ ಹೇಳುವುದಾದರೆ, ಅಭಿವೃದ್ಧಿಶೀಲತೆಯ ಹೆಸರಿನಲ್ಲಿ ನಾವು ಅನುಭವಿಸುತ್ತಿರುವ ಪರಿಸರ ನಾಶದ ತಲ್ಲಣಗಳಿಗೆ ಕೊನೆಯಿಲ್ಲವಾಗಿದೆ. ಈ ದೇಶ ಸ್ವತಂತ್ರವಾದ ಮೇಲೆ ಗಾಂಧೀಜಿ ಕನಸು ಕಂಡ ಗ್ರಾಮಕೇಂದ್ರಿತವೂ ಸರ್ವೋದಯ ಮೂಲವೂ ಆದ ಅಭಿವೃದ್ಧಿ ಯೋಜನೆಗಳು ಮೂಲೆಗುಂಪಾಗಿ, ಪಾಶ್ಚಾತ್ಯ ತಂತ್ರವಿಜ್ಞಾನ ಮೂಲವಾದ ಯೋಜನೆಗಳು ಜಾರಿಗೆ ಬಂದ ಕಾರಣದಿಂದ, ಈ ದೇಶ ಸಾಕಷ್ಟು ಪ್ರಗತಿಯನ್ನು ಸಾಧಿಸಿದಂತೆ ಮೇಲುನೋಟಕ್ಕೆ ಕಂಡರೂ ಈ ಮಾದರಿಯ ಯೋಜನೆಗಳಿಂದ ನಮ್ಮ ಪರಿಸರದ ಮೇಲೆ ಹಾಗೂ ಅದನ್ನೂ ಅವಲಂಬಿಸಿದ ಅರಣ್ಯ ಸಂಸ್ಕೃತಿಯ ಮೇಲೆ ಆಗಿರುವ ಮತ್ತು ಆಗುತ್ತಿರುವ ದುಷ್ಪರಿಣಾಮಗಳು ಗಾಬರಿಗೊಳಿಸುವಂತಿವೆ. ಮನುಷ್ಯ ಒಂದು ಕಾಲಕ್ಕೆ ನಿಸರ್ಗದೊಂದಿಗೆ ಬೆಳೆಸಿಕೊಂಡ ಪ್ರೀತಿಯ, ಆರಾಧನೆಯ ಪ್ರಾಣಮಯ ಸಂಬಂಧವನ್ನು ಕಡಿದುಕೊಂಡು, ಅದೊಂದು ಕೇವಲ ತನ್ನ ಉಪಭೋಗದ ವಸ್ತು ಎಂಬಂತೆ ನೋಡುವ ನಿಲುವಿಗೆ ಬಂದಿರುವುದು ಒಂದು ದುರಂತದ ಸಂಗತಿಯಾಗಿದೆ. ಗಾಂಧೀಜಿ ಹೇಳಿದರು "ಈ ಭೂಮಿ ಪ್ರತಿಯೊಬ್ಬರ ಅಗತ್ಯವನ್ನು ಪೂರೈಸಬಲ್ಲದು, ಆದರೆ ದುರಾಸೆಯನ್ನಲ್ಲ" ಎಂದು. ಆದರೆ ಇಂದಿನ ವಿಜ್ಞಾನಯುಗದಲ್ಲಿ ಮನುಷ್ಯ ಪ್ರಗತಿಯ ಹೆಸರಿನಲ್ಲಿ ಈ ನೆಲದ ಸಂಪತ್ತನ್ನು ದುರಾಸೆಯಿಂದ ಲೂಟಿ ಮಾಡುತ್ತಿದ್ದಾನೆ. ಇಂದು ನಮ್ಮ ಸಂದರ್ಭದಲ್ಲಿ ಅಧಿಕೃತವಾಗಿ ಮತ್ತು ಅನಧಿಕೃತವಾಗಿ ದೇಶಾದ್ಯಂತ ನಡೆಯುತ್ತಿರುವ ಗಣಿಗಾರಿಕೆ ನಿಸರ್ಗದ ಮೇಲೆ ನಮ್ಮ ಕಣ್ಣೆದುರಿಗೇ ನಡೆಯುತ್ತಿರುವ ಅತ್ಯಾಚಾರಕ್ಕೆ ಸಾಕ್ಷಿಯಾಗಿದೆ. ನಮ್ಮ ಕವಿಗಳು, ಕಲಾವಿದರು, ಶ್ರೀ ಸಾಮಾನ್ಯರು ಉತ್ಕಟವಾಗಿ ಪ್ರೀತಿಸಿದ ನಿಸರ್ಗ ಇಂದು ಕೇವಲ ಮಾರುಕಟ್ಟೆಯ ವಸ್ತುವಾಗಿದೆ. ಹೀಗಾಗಿ ನಾವು ತಿನ್ನುವ ಅನ್ನ, ಕುಡಿಯುವ ನೀರು, ಉಸಿರಾಡುವ ಗಾಳಿ ಎಲ್ಲವೂ ಮಲಿನವಾಗಿವೆ. ಈ ಹಿನ್ನೆಲೆಯಲ್ಲಿ ನಿಸರ್ಗವನ್ನು ಪ್ರೀತಿಸುವುದು ಬಹುದೊಡ್ಡ ಮೌಲ್ಯ ಎಂಬುದನ್ನು ಮರೆತಿದ್ದೇವೆ. ನಿಸರ್ಗ ಪ್ರೀತಿಯೆನ್ನುವುದು ಜೀವನ ಪ್ರೀತಿಯ ವಿಸ್ತರಣೆ ಎಂಬ ಪ್ರಥಮ ಪಾಠವನ್ನು ನಮ್ಮ ಮಕ್ಕಳಿಗೆ ಹೇಳಿಕೊಡಬೇಕಾಗಿದೆ. ಏಕೆಂದರೆ ಒಂದು ಗಿಡವನ್ನು, ಮರವನ್ನು, ಹೂವನ್ನು, ಹಕ್ಕಿಯನ್ನು, ಗುಡ್ಡವನ್ನು, ಬೆಟ್ಟವನ್ನು, ಹರಿಯುವ ಹೊಳೆಯನ್ನು ಪ್ರೀತಿಸಲಾರದವನು ಮನುಷ್ಯರನ್ನು ಪ್ರೀತಿಸಲು ಹೇಗೆ ಸಾಧ್ಯ? ನಮ್ಮ ಮುಂದಿರುವ ಸವಾಲು ಯಾವುದೆಂದರೆ ನಿಸರ್ಗವನ್ನು ನಿರ್ದಯವಾಗಿ ಕೊಳ್ಳೆಹೊಡೆಯುವುದೇ ಪ್ರಗತಿ ಎಂದು ತಿಳಿದ ಈ ದಿನಗಳಲ್ಲಿ ನಿಸರ್ಗ ಸಂರಕ್ಷಣೆಯನ್ನೂ ಅಭಿವೃದ್ಧಿಶೀಲತೆಯನ್ನೂ ಹೊಂದಿಸಿಕೊಂಡು ಹೋಗುವುದು ಹೇಗೆ ಎನ್ನುವುದೇ ಆಗಿದೆ. ಈ ಕುರಿತು ಗಂಭೀರವಾಗಿ ಯೋಚಿಸಬೇಕಾಗಿದೆ.

* * *

ಜನಪದ ಸೇವಾ ಟ್ರಸ್ಟ್ ಸಮಾಚಾರ

ಕಳೆದ ೨ ವರ್ಷಗಳಿಂದ ನಿಲುಗಡೆಗೆ ಬಂದಿದ್ದ ಖಾದಿ ಗ್ರಾಮೋದ್ಯೋಗ ಭಂಡಾರವನ್ನು ಪುನಃ ಪ್ರಾರಂಭಿಸಲಾಯಿತು. ಅದು ಪ್ರಾರಂಭವಾದ ದಿನದಿಂದ ಸ್ಥಳೀಯ ಖಾದಿ ಅಭಿಮಾನಿಗಳನ್ನು ಆಕರ್ಷಿಸುತ್ತಿದೆ. ಕ್ರಮೇಣ ಖಾದಿ ವ್ಯಾಪಾರವು ವೃದ್ಧಿಸುವ ಸೂಚನೆಗಳು ಕಂಡು ಬರುತ್ತಿವೆ. ಖಾದಿ ಭಂಡಾರದ ಪುನರ್ ಚಾಲನೆಗಾಗಿ ಹೊಳೆ ನರಸೀಪುರ ಖಾದಿ ಸಹಕಾರ ಸಂಘದವರು ನೆರವಾಗಿದ್ದಾರೆ.

ಮೈಸೂರಿನ ಪ್ರಸಿದ್ಧ ಆಯುರ್ವೇದ ವೈದ್ಯರಾದ ಡಾ॥ ರಾಜೇಂದ್ರ ಮತ್ತು ಅವರ ಪತ್ನಿ ಭಾರತಿ ಸಂಸ್ಥೆಗೆ ಭೇಟಿ ಕೊಟ್ಟು ಹಿರಿಯ ನಾಗರಿಕರ ಉಪಯೋಗಕ್ಕಾಗಿ ಅಗತ್ಯವಾದ ಕೆಲವು ಔಷಧಿಗಳನ್ನು ಸಹ ಕೊಟ್ಟರು.

ಹೊಸ ಜೀವನ ದಾರಿ ಕೇಂದ್ರದಲ್ಲಿ ನೀರಿನ ಅಭಾವ ಉಂಟಾಗಿದ್ದರಿಂದ ಹೊಸದಾಗಿ ಒಂದು ಕೊಳವೆ ಬಾವಿಯನ್ನು ತೋಡಲಾಯಿತು. ಒಳ್ಳೆಯ ಪ್ರಮಾಣದಲ್ಲಿ ನೀರು ದೊರಕಿದೆ.

ಕಳೆದ ಎಂಟು ವರ್ಷಗಳಿಂದ ನಡೆಯುತ್ತಿರುವ ಸರ್ವೋದಯ ಪಾತ್ರೆ ಆಂದೋಲನದ ಅಂಗವಾಗಿ ಪಾತ್ರೆಗಳ ಸಂಖ್ಯೆಯನ್ನು ನೂರಕ್ಕೆ ಹೆಚ್ಚಿಸುವ ಪ್ರಯತ್ನ ನಡೆದಿದೆ. ಈಗ ಎಂಬತ್ತು ಮನೆಗಳಲ್ಲಿ ಪಾತ್ರೆಗಳಿವೆ.

ಟ್ರಸ್ಟಿನ ಆಶ್ರಯದಲ್ಲಿ ಕಳೆದ ಎರಡು ವರ್ಷಗಳಿಂದ ನಡೆಯುತ್ತಿರುವ ಹಿರಿಯ ನಾಗರಿಕರ ಸಂಘಟನೆಯ ಮೂಲಕ ಮೂವರು ಅರ್ಹ ಹಿರಿಯರಿಗೆ ವೃದ್ಧಾಪ್ಯ ವೇತನವನ್ನು ದೊರಕಿಸಿಕೊಡಲಾಯಿತು. ಇಬ್ಬರು ಹಿರಿಯರಿಗೆ ಕಣ್ಣಿನ ಶಸ್ತ್ರ ಚಿಕಿತ್ಸೆಯನ್ನು ಮಾಡಿಸಲಾಯಿತು.

ಇತ್ತೀಚೆಗೆ ಟ್ರಸ್ಟಿನ ಮಾಜಿ ಧರ್ಮದರ್ಶಿ ಬಿ.ಕೆ. ಕೆಂಚೇಗೌಡರ ಆರನೆ ವರ್ಷದ ಸ್ಮರಣ ಸಭೆಯಲ್ಲಿ ಮತ್ತು ಪಶ್ಚಿಮ ವಾಹಿನಿಯಲ್ಲಿ ನಡೆದ ಸರ್ವೋದಯ ಮೇಳದಲ್ಲಿ ಟ್ರಸ್ಟಿನ ಅಧ್ಯಕ್ಷರು ಭಾಗವಹಿಸಿದರು.

ಮೈಸೂರಿನ ಕಲಾಶಾಲೆಯೊಂದರ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ತಮ್ಮ ಆರು ದಿನಗಳ ಹೊರಾಂಗಣ ಶಿಕ್ಷಣಕ್ಕಾಗಿ ಹೊಸ ಜೀವನ ದಾರಿ ಕೇಂದ್ರದಲ್ಲಿ ಶಿಬಿರವನ್ನು ನಡೆಸಿದರು. ಬೆಂಗಳೂರಿನ 'ಸೃಷ್ಟಿ' ಎಂಬ ಸಂಸ್ಥೆಯ ವಿದ್ಯಾರ್ಥಿನಿಯರಲ್ಲಿ ಕೆಲವರು ಹಾಗೂ ಸಂಸ್ಥೆಯ ಮುಖ್ಯಸ್ಥರಾದ ಶ್ರೀಮತಿ ಗೀತಾನಾರಾಯಣ್‌ರವರು ಟ್ರಸ್ಟಿಗೆ ಭೇಟಿಕೊಟ್ಟು ಸಂಸ್ಥೆಯ ಕಾರ್ಯ ಕಲಾಪಗಳನ್ನು ಪರಿಚಯ ಮಾಡಿಕೊಂಡರು.

ಟ್ರಸ್ಟಿನ ಅಭಿಮಾನಿಯವರಾದ ಶ್ರೀಮತಿ ಚೊಕ್ಕಬಾಯಿಯವರು ಧನ ಸಹಾಯ ಮಾಡಿದರು.

* * *

ಜನಪದ ನಿಲಯದ ಅಂತರಂಗದಲ್ಲಿ . . . ೫೨

– *ಸುರೇಂದ್ರ ಕೌಲಗಿ*



ಜನಪದ ಸೇವಾ ಟ್ರಸ್ಟಿಗೆ ನೈತಿಕವಾಗಿ, ಸೈದ್ಧಾಂತಿಕವಾಗಿ ಮತ್ತು ಆರ್ಥಿಕವಾಗಿ ಸಹಾಯ ಮಾಡಿದ್ದಂಥ ಟ್ರಸ್ಟಿನ ಅಭಿಮಾನಿಗಳಲ್ಲಿ ಮುಖ್ಯರಾದವರು ಕೆ.ಎಸ್.ನಾರಾಯಣಸ್ವಾಮಿಯವರು. ಅವರು ಈಗ ಇಲ್ಲ. ಆದರೆ ಅವರ ಸ್ಮರಣೆ ಮತ್ತು ಅವರ ಸಹಾಯ ಟ್ರಸ್ಟಿನ ನರನಾಡಿಗಳಲ್ಲಿ ಸದಾ ಹರಿಯುತ್ತಲೇ ಇರುತ್ತದೆ. ನಾರಾಯಣಸ್ವಾಮಿಯವರು ಗಾಂಧಿ ವಿಚಾರವನ್ನು ಹೃದಯ ಪೂರ್ವಕವಾಗಿ ಹಾಗೂ ಬುದ್ಧಿಪೂರ್ವಕವಾಗಿ ಒಪ್ಪಿಕೊಂಡಿದ್ದರು. ಆದ್ದರಿಂದ ಅವರು ತಮ್ಮ ಕೊನೆಯ ದಿನದವರೆಗೂ ಗಾಂಧೀ ಸಿದ್ಧಾಂತವನ್ನೆ ಉಸಿರಾಡಿದರು. ಅವರು ಮೈಸೂರಿನಲ್ಲಿ ಗಾಂಧೀ ಶಾಂತಿ ಪ್ರತಿಷ್ಠಾನದ ಹಿರಿಯ ಕಾರ್ಯಕರ್ತರಾಗಿ ಕಾರ್ಯನಿರ್ವಹಿಸುತ್ತಿದ್ದಾಗ ಟ್ರಸ್ಟಿನ ಸಂಬಂಧ ಅವರೊಂದಿಗೆ ಬೆಳೆಯಿತು. ಅದು ೬೦ ರ ದಶಕಗಳಲ್ಲಿ. ಮೈಸೂರಿನ ರಮಾವಿಲಾಸ ರಸ್ತೆಯಲ್ಲಿದ್ದ ಗಾಂಧೀ ಗ್ರಂಥ ಮಾಲೆಯ ಆವರಣದಲ್ಲಿಯ ಒಂದು ಕೊಠಡಿಯಲ್ಲಿ ನಾರಾಯಣಸ್ವಾಮಿಯವರು ಕೆಲಸ ಮಾಡುತ್ತಿದ್ದ ಗಾಂಧಿ ಪ್ರತಿಷ್ಠಾನದ ಕಛೇರಿಯೂ ಇತ್ತು. ಆ ಪ್ರತಿಷ್ಠಾನದ ಮೂಲಕ ನಾರಾಯಣಸ್ವಾಮಿಯವರು ಕೈಗೊಂಡ ಅನೇಕ ಬಗೆಯ ಗಾಂಧಿ ವಿಚಾರ ಪ್ರಣೀತ ಕಾರ್ಯಕ್ರಮಗಳ ಮೂಲಕ ಒಳ್ಳೆಯ ಹೆಸರನ್ನು ಪಡೆದಿದ್ದರು. ಅಂದಿನ ಕಾಲದಲ್ಲಿ ಮೈಸೂರು ನಗರದಲ್ಲಿದ್ದ ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿಯ ಎಲ್ಲ ಹಿರಿಯ ವ್ಯಕ್ತಿಗಳೊಂದಿಗೆ ನಾರಾಯಣಸ್ವಾಮಿಯವರ ಸಂಪರ್ಕ ಬಂದಿತ್ತು. ಅವರ ಆ ಕಟ್ಟಡದಲ್ಲಿಯೆ ಗಾಂಧಿ ಗ್ರಂಥ ಮಾಲೆಯ ಸಂಪಾದಕ ಮಂಡಳಿಯ ಸಭೆಯೂ ನಡೆಯುತ್ತಿತ್ತು. ಆ ಗ್ರಂಥಮಾಲೆಯ ಮುಖ್ಯ ಸಂಪಾದಕರಾಗಿದ್ದ ಪ್ರೋ.ಯಾಮನಾಚಾರ್ಯರು ನಾರಾಯಣಸ್ವಾಮಿಯವರ ವಿಶೇಷ ಪ್ರೀತಿಗೆ ಮತ್ತು ಗೌರವಕ್ಕೆ ಪಾತ್ರರಾಗಿದ್ದರು. ಅಲ್ಲೆ ಗ್ರಂಥ ಮಾಲೆಯ ಸಂಪಾದಕ ಮಂಡಳಿಯ ಸಭೆಗೆ ಬರುತ್ತಿದ್ದ ಸಾಹಿತಿಗಳಾದ ಸಿದ್ಧವನಹಳ್ಳಿ ಕೃಷ್ಣಶರ್ಮ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ರಾಮಚಂದ್ರ ವಡವಿ, ಕೆ.ಸಂಪದ್ಗಿರಿರಾವ್, ಪ್ರೋ.ಬಿ.ಆರ್.ಪ್ರಾಣೇಶ್‌ರಾವ್, ಖಾದ್ರಿ ಶಾಮಣ್ಣ ಮುಂತಾದವರ ಒಡನಾಟವು ಸಹ ನಾರಾಯಣಸ್ವಾಮಿಯವರಿಗೆ ಲಭಿಸಿತ್ತು. ಈ ಎಲ್ಲ ದಿಗ್ಗಜರು ಕೂಡ ನಾರಾಯಣಸ್ವಾಮಿಯವರ ಬಗ್ಗೆ ಅಪಾರವಾದ ಸ್ನೇಹ ಭಾವನೆಯನ್ನೂ ಗೌರವವನ್ನೂ ಇಟ್ಟುಕೊಂಡಿದ್ದರು. ನಾರಾಯಣಸ್ವಾಮಿಯವರು ತುಂಬಾ ಸಜ್ಜನಿಕೆಯುಳ್ಳವರಾಗಿದ್ದರು. ಮಾತುಗಳು ಮೃದುವಾಗಿರುತ್ತಿದ್ದವು. ಎಂದೂ ಯಾರೊಂದಿಗೂ ಕಠಿಣವಾಗಿ ಮಾತನಾಡಿದವರಲ್ಲ. ಅವರಲ್ಲಿ ತೀಕ್ಷ್ಣವಾದ ವಿಮರ್ಶಾ ಬುದ್ಧಿಮತ್ತೆ ಇತ್ತು. ಆದ್ದರಿಂದ

ಪ್ರಚಲಿತ ರಾಜಕೀಯ, ಸಾಮಾಜಿಕ ವಿಷಯಗಳ ಬಗ್ಗೆ ತಮ್ಮದೇ ಆದ ಧಾಟಿಯಲ್ಲಿ ವಿಮರ್ಶೆಯನ್ನು ಮಾಡಿ ಗಾಂಧಿ ವಿಚಾರ ಹೇಗೆ ಪ್ರಸ್ತುತ ಎಂಬುದನ್ನು ಎದುರಾಳಿಗಳು ಒಪ್ಪುವಂತೆ ಹೇಳುವ ಸಾಮರ್ಥ್ಯ ಅವರಲ್ಲಿತ್ತು. ಗ್ರಂಥಮಾಲೆಯ ಕಟ್ಟಡದೊಳಗೆ ಮೆಹಡಿಯನ್ನೇರಿ ಒಳಗೆ ಪ್ರವೇಶಿಸುತ್ತಿದ್ದಂತೆಯೆ ಎಡಭಾಗದ ಕೋಣೆಯಲ್ಲಿ ಗಾಂಧಿ ಭಾವಚಿತ್ರದ ಹಿನ್ನೆಲೆಯಲ್ಲಿ ಬರೆಯುತ್ತಲೊ, ಓದುತ್ತಲೊ ಕುಳಿತಿರುತ್ತಿದ್ದ ನಾರಾಯಣಸ್ವಾಮಿಯವರನ್ನು ನೋಡುವುದೇ ಒಂದು ಚೇತೋಹಾರಿಯಾದ ಸಂಗತಿಯಾಗಿತ್ತು. ಅವರು ಮೈಸೂರು ನಗರದ ಶಾಲಾ-ಕಾಲೇಜುಗಳಲ್ಲಿ ಗಾಂಧಿ ವಿಚಾರದ ಪ್ರಚಾರಕ್ಕಾಗಿ ಬಹಳಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದರು. ಸಮಯ ಸಂದರ್ಭ ಬಂದಾಗಲೆಲ್ಲ ಯುವಕರಿಗಾಗಿ ಶಿಬಿರಗಳನ್ನು ನಡೆಸುವುದನ್ನು ಮರೆಯುತ್ತಿರಲಿಲ್ಲ. ಪ್ರತಿವರ್ಷ ಫೆಬ್ರವರಿ ಮಾಹೆಯಲ್ಲಿ ಪಶ್ಚಿಮವಾಹಿನಿಯಲ್ಲಿ ನಡೆಯುವ ಸರ್ವೋದಯ ಮೇಳದ ವ್ಯವಸ್ಥೆ ಮಾಡುವುದರಲ್ಲಿಯೂ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ಮೇಳ ಸೇರುವ ಮುನ್ನವೆ ಹಿಂದಿನ ದಿನ ಹೋಗಿ ಪಶ್ಚಿಮವಾಹಿನಿಯಲ್ಲಿ ವಾಸ್ತವ್ಯ ಕೂಡ ಮಾಡುತ್ತಿದ್ದರು. ಮೈಸೂರು ವಿಶ್ವವಿದ್ಯಾಲಯದ ಜೊತೆಗೆ ನಿಕಟ ಸಂಪರ್ಕವನ್ನಿರಿಕೊಂಡಿದ್ದರು. ಗಾಂಧಿ ಗ್ರಂಥ ಮಾಲೆಗಾಗಿ ಹಲವಾರು ಪುಸ್ತಕಗಳನ್ನು ಇಂಗ್ಲಿಷಿನಿಂದ ಕನ್ನಡಕ್ಕೆ ತರ್ಜುಮೆ ಮಾಡಿಕೊಟ್ಟಿದ್ದರು ಮತ್ತು ಸ್ವತಃ ಗಾಂಧಿ ಮತ್ತು ಅವರ ವಿಚಾರಗಳ ಬಗ್ಗೆ ಪುಸ್ತಕಗಳನ್ನು ಬರೆದಿದ್ದರು. ಕನ್ನಡದಲ್ಲಿ ಗಾಂಧೀ ವಿಚಾರ ಸಾಹಿತ್ಯ ವಿಶೇಷವಾಗಿ ಬರುವುದಕ್ಕೆ ನಾರಾಯಣಸ್ವಾಮಿಯವರ ಶ್ರಮ ಮತ್ತು ಕೊಡುಗೆ ಗಣನೀಯವಾಗಿದೆ. ಕರ್ನಾಟಕ ಸರ್ಕಾರದಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆಯ ಮಂತ್ರಿಯಾಗಿದ್ದ ನಜೀರ್ ಸಾಹೇಬರು ನಾರಾಯಣಸ್ವಾಮಿಯವರ ಗಾಂಧೀ ವಿಚಾರದ ಬಗ್ಗೆ ಹೊಂದಿದ್ದ ನಿಷ್ಠೆ ಮತ್ತು ಬದ್ಧತೆಯನ್ನು ತಿಳಿದಿದ್ದರು. ಸ್ವತಃ ನಜೀರ್ ಸಾಹೇಬರು ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಅಪಾರವಾದ ನಂಬಿಕೆಯನ್ನಿಟ್ಟಿದ್ದರು. ಆದ್ದರಿಂದ ಅದರ ಯಶಸ್ಸಿಗಾಗಿ ಸದಾ ಚಿಂತಿಸುತ್ತಿದ್ದರು. ಪಂಚಾಯತ್‌ರಾಜ್ ವ್ಯವಸ್ಥೆಯ ಬಗ್ಗೆ ಗಾಂಧೀಜಿಯವರ ಕಲ್ಪನೆಗಳನ್ನು ತಿಳಿಯುವ ಕುತೂಹಲ ನಜೀರ್ ಸಾಹೇಬರಲ್ಲಿ ಸಹಜವಾಗಿಯೇ ಹುಟ್ಟಿತು. ಆದ್ದರಿಂದ ಅವರು ಆಗ ಬೆಂಗಳೂರಿನಲ್ಲಿ ಗಾಂಧೀ ಶಾಂತಿ ಪ್ರತಿಷ್ಠಾನದ ಮುಖ್ಯಸ್ಥರಾಗಿದ್ದ ನಾರಾಯಣಸ್ವಾಮಿಯವರೊಂದಿಗೆ ಸಂಪರ್ಕ ಬೆಳೆಸಿಕೊಂಡಿದ್ದರು. ಆದ್ದರಿಂದ ಆಗಾಗ್ಗೆ ಅವರ ಬೆಂಗಳೂರಿನ ವಿಜಯನಗರದಲ್ಲಿದ್ದ ನಾರಾಯಣಸ್ವಾಮಿಯವರ ಮನೆಗೆ ಹೋಗಿ ಬರುತ್ತಿದ್ದರು. ನಜೀರ್ ಸಾಹೇಬರ ವಿನಂತಿಯ ಮೇರೆಗೆ ನಾರಾಯಣಸ್ವಾಮಿಯವರು ಪಂಚಾಯತ್‌ರಾಜ್ ವ್ಯವಸ್ಥೆಯ ಬಗ್ಗೆ ಗಾಂಧೀ ವಿಚಾರವನ್ನು ಬಿಂಬಿಸುವ ಪುಸ್ತಕವನ್ನು ಬರೆದುಕೊಟ್ಟರು. ಆ ಪುಸ್ತಕವು ಕರ್ನಾಟಕದ ಎಲ್ಲ ಪಂಚಾಯತಿಗಳಿಗೆ ತಲುಪುವಂತೆ ನಜೀರ್ ಸಾಹೇಬರು ಪ್ರಯತ್ನಿಸಿದರು. ಇಂದಿಗೂ ಆ ಪುಸ್ತಕ ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಆಸಕ್ತರಾಗಿರುವವರಿಗೆ ತುಂಬಾ ಉಪಯುಕ್ತವಾಗಿದೆ.

ನಾರಾಯಣಸ್ವಾಮಿಯವರಲ್ಲಿ ಇದ್ದಂತಹ ವಿಶೇಷ ಗುಣವೆಂದರೆ ಅವರು ಎಂದೂ ಯಾವುದೇ ಸನ್ಮಾನವನ್ನು ಪಡೆಯಲು ಇಷ್ಟಪಡಲಿಲ್ಲ ಸನ್ಮಾನಕ್ಕಾಗಿ ಬಂದ ಎಲ್ಲ ಕರೆಗಳನ್ನು

ವಿನಮ್ರವಾಗಿ ನಿರಾಕರಿಸಿದರು. ಸದಾ ಬಿಳಿ ಖಾದಿ ಪಂಚೆ, ಜುಬ್ಬ ಧರಿಸಿ ಬೆನ್ನಮೇಲೆ ಉಲ್ಲನ್ ಶಾಲನ್ನು ಹೊದ್ದುಕೊಂಡು ಓಡಾಡುತ್ತಿದ್ದ ನೀಳಕಾಯದ ಸ್ಫುರದ್ರೂಪಿ ನಾರಾಯಣಸ್ವಾಮಿಯವರು ಯಾರ ಗಮನವನ್ನಾದರೂ ಸಹಜವಾಗಿ ಸೆಳೆಯುತ್ತಿದ್ದರು. ನಾರಾಯಣಸ್ವಾಮಿಯವರಿಗೆ ಜನಪದ ಸೇವಾ ಟ್ರಸ್ಟಿನ ಪರಿಚಯವಾದಾಗ ಅವರಿಗೆ ತುಂಬಾ ಸಂತೋಷವಾಯಿತು. ಏಕೆಂದರೆ ಗ್ರಾಮೀಣ ಪ್ರದೇಶದಲ್ಲಿ ಗಾಂಧೀ ವಿಚಾರವನ್ನಿಟ್ಟುಕೊಂಡು ರಚನಾತ್ಮಕ ಕೆಲಸಮಾಡುವ ಸಂಸ್ಥೆ ಅವರಿಗೆ ಇಷ್ಟವಾದುದು ಆಶ್ಚರ್ಯವೇನಲ್ಲ. ಟ್ರಸ್ಟಿನ ಹಲವಾರು ಕಾರ್ಯಕ್ರಮಗಳ ನಿಮಿತ್ತ ನಾರಾಯಣಸ್ವಾಮಿಯವರು ಮೇಲುಕೋಟೆಗೆ ಬಂದದ್ದುಂಟು. ಮುಂದೆ ಟ್ರಸ್ಟ್ ಅಂಗವಿಕಲ ಮಕ್ಕಳಿಗಾಗಿ ಕರುಣಾಗೃಹವನ್ನು ಪ್ರಾರಂಭಿಸಿದ ಮೇಲಂತೂ ನಾರಾಯಣಸ್ವಾಮಿಯವರು ಟ್ರಸ್ಟಿನ ಮತ್ತು ಅದರ ಇತರ ಕಾರ್ಯಕ್ರಮಗಳ ಬಗ್ಗೆ ಹೆಚ್ಚು ಆಸಕ್ತಿವಹಿಸುತ್ತಾ ಬಂದರು. ಹೊಸ ಜೀವನ ದಾರಿ ಕೇಂದ್ರದಲ್ಲಿ ಯಾವ ಕಟ್ಟಡದ ಸೌಲಭ್ಯವೂ ಇಲ್ಲದಂಥ ಸಮಯದಲ್ಲಿ ಅವರು ಪ್ರಪ್ರಥಮವಾಗಿ ತಮ್ಮ ತಾಯಿ ರಾಧಮ್ಮ ಮತ್ತು ತಂದೆ ಶಾಮಣ್ಣನವರ ಹೆಸರಿನಲ್ಲಿ ಧನಸಹಾಯ ಮಾಡಿ ಹೊಸ ಜೀವನ ದಾರಿಯಲ್ಲಿ ಮೊಟ್ಟಮೊದಲನೆ ಕಟ್ಟಡದ ನಿರ್ಮಾಣಕ್ಕೆ ಕಾರಣರಾದರು. ಆ ಕಟ್ಟಡಕ್ಕೆ ರಾಧೇಶ್ಯಾಮ್ ಎಂದು ನಾಮಕರಣ ಮಾಡಲಾಯಿತು. ಇಂದಿಗೂ ಆ ಕಟ್ಟಡ ಆ ಹೆಸರಿನಿಂದಲೇ ಗುರ್ತಿಸಲ್ಪಡುತ್ತಿದೆ. ಕ್ರಮೇಣ ನಾರಾಯಣಸ್ವಾಮಿಯವರು ತಮ್ಮ ಭಾವ ಹೊಳೆನರಸೀಪುರ ವೆಂಕಟಸುಬ್ಬಯ್ಯನವರ ಪರಿಚಯವನ್ನು ಟ್ರಸ್ಟಿಗೆ ಮಾಡಿಸಿ ಅವರಿಂದಲೂ ಸಹ ದೊಡ್ಡ ಪ್ರಮಾಣದ ಧನಸಹಾಯವನ್ನು ಟ್ರಸ್ಟಿಗೆ ದೊರೆಯುವಂತೆ ಮಾಡಿದರು. ಮೇಲುಕೋಟೆಯಲ್ಲಿರುವ ಈಗಿನ ಕರುಣಾಗೃಹದ ಕಟ್ಟಡದಲ್ಲಿ ಒಂದು ಕೊಠಡಿಯ ನಿರ್ಮಾಣಕ್ಕೆ ವೆಂಕಟಸುಬ್ಬಯ್ಯನವರು ತಮ್ಮ ಅತ್ತೆ ಮಾವಂದಿರಾದ ಎನ್.ಕೆ.ವೆಂಕಟರಾಮಯ್ಯ ಮತ್ತು ನಂಜಮ್ಮನವರ ಹೆಸರಿನಲ್ಲಿ ಧನಸಹಾಯ ಮಾಡಿದರು. ಹೀಗೆ ಹಲವಾರು ಬಗೆಯಲ್ಲಿ ಟ್ರಸ್ಟಿನ ಕಾರ್ಯಕ್ರಮಗಳಿಗೆ ಕೆ.ಎಸ್.ನಾರಾಯಣಸ್ವಾಮಿಯವರು ತಮ್ಮ ಅಪಾರ ನೈತಿಕ ಬೆಂಬಲದ ರಕ್ತ-ಮಾಂಸವನ್ನು ತುಂಬಿದರು. ಅವರು ಟ್ರಸ್ಟಿನ ಮಟ್ಟಿಗೆ ಪ್ರಾತಃಸ್ಮರಣೀಯರಾಗಿದ್ದಾರೆ.

ನಾರಾಯಣ ಸ್ವಾಮಿಯವರ ಜೀವನ ದೃಷ್ಟಿ ಹೇಗಿತ್ತೆಂಬುದನ್ನು ತಿಳಿಯುವುದು ಕಷ್ಟವೇನಲ್ಲ. ಅವರು ವಾಸಿಸುತ್ತಿದ್ದ ಮನೆಗೆ ಹೋದರೆ ಅವರು ಊಟ ಮಾಡುತ್ತಿದ್ದ ಕೋಣೆಯ ಗೋಡೆಯ ಮೇಲೆ ಅವರೇ ತಮ್ಮ ಕೈಯಿಂದಲೇ ಬರೆದು ಅಂಟಿಸಿರುವ 'ಮಂಕುತಿಮ್ಮನ ಕಗ್ಗ'ದ ಈ ಸಾಲುಗಳನ್ನು ವಾಚಿಸಿದರೆ ಗೊತ್ತಾಗುತ್ತದೆ.

ಇರುವ ಕೆಲಸವ ಮಾಡು ಕಿರಿದೆನೆದೆ ಮನವಿಟ್ಟು
ದೊರೆತುದ ಹಸಾದವೆಂದುಣ್ಣು ಗೊಣಗಿಡದೆ ।
ಧರಿಸು ಲೋಕದ ಭರವ ಪರಮಾರ್ಥವನು ಬಿಡದೆ
ಹೊರಡು ಕರೆ ಬರಲ್ ಅಳದೆ – ಮಂಕುತಿಮ್ಮ ॥

* * *

ಬಾಂಧವ್ಯ

(ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾ ಸ್ಮರಿಸುತ್ತದೆ)

೧) ಶ್ರೀ ತೈಲೂರು ವೆಂಕಟಕೃಷ್ಣ, ಮಂಡ್ಯ

ಈ ಬಂಧುಗಳು ತಮ್ಮ ಚಂದಾವನ್ನು ನವೀಕರಿಸಿದ್ದಕ್ಕಾಗಿ ಮತ್ತು ಹೊಸದಾಗಿ ಜನಪದ ವಿಚಾರಕ್ಕೆ ಚಂದಾದಾರರಾದ ವಿ.ಆರ್.ಕಟ್ಟಿ, ಕಾರ್ಯಕ್ರಮ ನಿರ್ದೇಶಕರು (ಜಿಯೋಸ್ಪ್ಯಾಟ್) ಬೆಂಗಳೂರು ಇವರಿಗೆ ಕೃತಜ್ಞತೆಗಳು.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ 15 ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

–ಸಂಪಾದಕರು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ *(–ಸಂಪಾದಕರು)*

ತೆರೆದ-ಅಂಚೆ

KA / SK / MND / 470 / 2006-2008
Regd. no. KAR / KAN / 2000 / 3820

ಶ್ರೀಮತಿ/ ಶ್ರೀ...

....

....

jANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431.
DTP Sanketh, Melkote. Printed at INDIVARA, Nagamangala Phone : 08236 – 298754 e-mail : janapada@yahoo.com